₹ 5/-

# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

Nesaru Tingalole Vol XXXIV - 3 March 2016

PAGES 16



‘ಶ್ರೀರಂಗ ರಂಗೋತ್ಸವ’

ದೀಪ ಪ್ರಜ್ವಲಿಸುವ ಮೂಲಕ ಉದ್ಘಾಟಿಸುತ್ತಿರುವ ಶ್ರೀಮತಿ ಉಷಾ ದೇಸಾಯಿ

The Mysore Association, Bombay
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

# ಶ್ರೀರಂಗ ರಂಗೋತ್ಸವ

ಕಳೆದ ತಿಂಗಳು ಮೈಸೂರು ಅಸೋಸಿಯೇಷನ್ನಿನಲ್ಲಿ ಮೂರು ದಿನಗಳ ನಾಟಕೋತ್ಸವ 'ಶ್ರೀರಂಗ ರಂಗೋತ್ಸವ' ನಡೆಯಿತು. ಎರಡು ಸ್ತ್ರೀ ಪ್ರಧಾನ ನಾಟಕಗಳು, ಒಂದು ಪತ್ತೇದಾರಿ ಛಾಯೆಯ ಮನೋವಿಶ್ಲೇಷಣೆಯ ಆಧಾರಿತ ನಾಟಕ.





ಮೊದಲ ದಿನ ಶಿವಮೊಗ್ಗದ 'ಸ್ಫೂರ್ತಿ ಸಾಂಸ್ಕೃತಿಕ ಸಂಸ್ಥೆಯವರಿಂದ ಡಾ. ಸತೀಶ್ ಸಾಸ್ವೆಹಳ್ಳಿಯವರ ರಚನೆ ಮತ್ತು ನಿರ್ದೇಶನದ 'ಮೈಥಿಲಿ' ಎಂಬ ಏಕ ಪಾತ್ರಾಭಿನಯದ ನಾಟಕದ ಪ್ರಯೋಗವಾಯ್ತು. ಮುಖ್ಯ ಪಾತ್ರದಲ್ಲಿ ಸುಪ್ರಿಯಾ ಎಸ್. ರಾವ್ ಅವರ ಅಭಿನಯ ಸಾಕಷ್ಟು ಕಳೆಗಟ್ಟಿತ್ತು. ಅವರು ತಾವೇ ಸೀತೆಯ ಪಾತ್ರದಲ್ಲಿ ನಿಂತು ಈಗಿನ ಆಧುನಿಕ ಚಿಂತನಾ ಕ್ರಮದಲ್ಲಿ ತಮ್ಮ ಜೀವಿತದ ಕ್ಷಣಗಳ ವಿಶ್ಲೇಷಣೆ ನಡೆಸುತ್ತ ಇತರ ಪಾತ್ರಗಳ ಸ್ಥಾನವನ್ನೂ ಆಗಾಗ್ಗೆ ತುಂಬುತ್ತ ರಾಮಾಯಣವನ್ನು ಈಗಿನ ಪರಿಸ್ಥಿತಿಗೆ ಒಗ್ಗಿಸಿದಂತೆ ಬಣ್ಣಿಸಿದರು. ನಾಟಕದ ಅನೇಕ ಸಂಭಾಷಣೆಗಳೂ ಸಭಿಕರಲ್ಲಿನಗೆ ಬುಗ್ಗೆಯನ್ನು ಎಬ್ಬಿಸಿತು. ಆದರೆ ಇದು ಒಂದು ರೀತಿಯಲ್ಲಿ ಏಕಪಕ್ಷೀಯ ದೃಷ್ಟಿಕೋನವುಳ್ಳ ತನ್ನನ್ನು ಸದಾ ಅನ್ಯಾಯಕ್ಕೆ ಬಲಿಯಾದ ವ್ಯಕ್ತಿಯ ಸ್ಥಾನದಲ್ಲಿಟ್ಟುಕೊಂಡ ಸ್ತ್ರೀಯೊಬ್ಬಳ ಪ್ರಲಾಪದಂತೆ ಬಿಂಬಿಸಿದ್ದು ವಿಡಂಬನಾತ್ಮಕವಾಗಿತ್ತು.

ಎರಡನೆಯ ದಿನ ಹೆಸರಾಂತ ಲೇಖಕಿ ಸಾರಾ ಅಬೂಬಕರ್ ಅವರ ಚೊಚ್ಚಿಲ ಕಾದಂಬರಿ "ಚಂದ್ರಗಿರಿಯ ತೀರದಲ್ಲಿ"ಯ ನಾಟಕ ರೂಪಾಂತರ ನಯನಾ ಸೂಡ ಅವರಿಂದ ಪ್ರದರ್ಶಿತವಾಯ್ತು. ಕಾದಂಬರಿಯ ಮೂಲ ಉದ್ದೇಷಕ್ಕೆ ಚ್ಯುತಿ ಬರದಂತೆ ರೂಪ ಕೋಟೇಶ್ವರ ಅವರು ನಾಟಕವನ್ನು ರೂಪಾಂತರಿಸಿದ್ದ ನಯನ ಸೂಡ ಅವರು ನಿರ್ದೇಶನದ ಜೊತೆ ಮುಖ್ಯ ಪಾತ್ರಾಭಿನಯವನ್ನೂ ನಿಭಾಯಿಸಿದ್ದರು. ಒಂದು ಧಾರ್ಮಿಕ ಕಟ್ಟಳೆ ಹೆಣ್ಣಿನ ಜೀವನದಲ್ಲಿ ಅದರಲ್ಲೂ ತಂದೆಯ ಅಧೀನದಲ್ಲಿರುವವರಿಗೆ ಹೇಗೆ ಮಾರಕವಾಗುತ್ತದೆ ಎಂಬುದನ್ನು ಬಹಳ ಮಾರ್ಮಿಕವಾಗಿ ರಂಗದ ಮೇಳೆ ತರುವುದರಲ್ಲಿ ಯಶಸ್ವಿಯಾದರು. ನಾಟಕದಲ್ಲಿ ಒಳ್ಳೆಯ ಬಿಗಿಯಿದ್ದು ಎಲ್ಲೂ ಅತಿರೇಕ ಭಾವ ಪ್ರದರ್ಶನವಿಲ್ಲದಿದ್ದರೂ ಆ ಸಂಯಮದಲ್ಲೂ ಪಾತಿಮಾಳ ಪಾತ್ರದ ಎಲ್ಲ ನೋವು ನಲಿವಿನ ವಿವಿಧ ಸ್ಥರಗಳನ್ನೂ ಬಚ್ಚಿಡುವುದರಲ್ಲಿ ನಯನಾರ ಅಭಿನಯ ಫಲಿಸಿ ಸಭಿಕರನ್ನು ತಟ್ಟಿತ್ತು. ಹೆಣ್ಣಿನ ನೋವಿಗೆ ಧರ್ಮವೆಂಬುದು ಒಂದು ಮುಖವಾಡವಷ್ಟೆ. ಇದು ಎಲ್ಲರಿಗೂ ಸಂಬಂಧಿಸಿದ್ದು ಎಂದು ಸೂಚ್ಯವಾಗಿಯಾದರೂ ತಲುಪಿತ್ತು.

ಮಾರನೆಯ ದಿನ ಕಿರುತೆರೆಯ ಖ್ಯಾತನಾಯಕರಾದ ಶ್ರೀನಾಥ ವಸಿಷ್ಠ ಅವರ ರಚನೆ ಮತ್ತು ನಿರ್ದೇಶನದಲ್ಲಿ ಬೆಂಗಳೂರಿನ ಶಶಿ ಕಲಾವಿದರು 'ವ್ಯೂಹ' ಎಂಬ ನಾಟಕವನ್ನು ಪ್ರದರ್ಶಿಸಿದರು. ನಾಟಕದಲ್ಲಿ ಒಬ್ಬ ಮಾನಸಿಕ ಅಸ್ವಸ್ಥ ವ್ಯಕ್ತಿ ತನ್ನ



ದುರಾಸೆಗೆ ಮನೆಯ ಎಲ್ಲ ಸದಸ್ಯರ ಕೊಲೆಗೆ ಕಾರಣವಾಗಿ, ತಾನೂ ಆತ್ಮಹತ್ಯೆ ಮಾಡಿಕೊಳ್ಳುವ ಹಂದರದಲ್ಲಿ ಕಥೆಯನ್ನು ನಡೆಸಿಕೊಂಡು ಹೋಗಿದ್ದಾರೆ. ಆದರೆ ಇದರಲ್ಲಿ ಅನೇಕ ನ್ಯೂನ್ಯತೆಗಳು ಕಂಡು ಬಂದು, ನಟನೆಯೂ ಸಾಕಷ್ಟು ಪರಿಣಾಮಕಾರಿಯಾಗಿ ಕಾಣಲಿಲ್ಲ. ■



**ಫೆಬ್ರವರಿ 11, 2016 ರಂದು ಮಾಘಿ ಗಣಪತಿ ಹಾಗೂ ಶ್ರೀ ಸತ್ಯ ನಾರಾಯಣ ಪೂಜೆಯನ್ನು ನೆರವೇರಿಸುತ್ತಿರುವ ಶ್ರೀಮತಿ ಮತ್ತು ಶ್ರೀ.ಶಶಿಕಾಂತ್ ಜೋಶಿ ದಂಪತಿಗಳು.**

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎಸ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574

Email :
mysoreassociation.mumbai@gmail.com

Website :
www.mysoreassociation.in

## *ಸಂಪಾದಕೀಯ*

# ನೇಸರು

## ತಿಂಗಳೋಲೆ

**ಸಂಪುಟ 34** **ಮಾರ್ಚ್ 2016** **ಸಂಚಿಕೆ 2**

ಸದ್ಯದ ಪರಿಸ್ಥಿತಿಯಲ್ಲಿ ಎಲ್ಲರ ಮನೆಯಲ್ಲಿರುವ ಬಹಳ ಮುಖ್ಯವಾದ ಒತ್ತಡ ಇರೋದು ಮಕ್ಕಳ ಪರೀಕ್ಷೆ. ಅದರಲ್ಲೂ ಬೋರ್ಡ್ ಎಕ್ಸಾಮ್ ಬರೆಯುವ ಮಕ್ಕಳಿಗೂ ಅವರ ಪೋಷಕರಿಗೂ ಬಹಳ ಮುಖ್ಯವಾದ ಪರೀಕ್ಷೆ. ಪರೀಕ್ಷೆ ಮುಗಿದ ಮೇಲೆ ಮಕ್ಕಳ ಜೊತೆಗೆ ಅವರ ಪೋಷಕರಿಗೂ ಪರೀಕ್ಷೆ ಬರೆದು ಬಂದಂತಹ ಅನುಭವ. ಮಕ್ಕಳ ಮುಂದಿನ ಭವಿಷ್ಯವನ್ನು ನಿರ್ಧರಿಸುವುದು ಈ ಪರೀಕ್ಷೆಗಳೇ ಆಗಿರೋದರಿಂದ ಮಕ್ಕಳೊಂದಿಗೆ ಮಕ್ಕಳ ಪಾಲಕರೂ ಕೂಡ ಮಕ್ಕಳ ಪರೀಕ್ಷೆಗೆ ನಿರಂತರವಾಗಿ ಅದರ ಹಿಂದೆ ತೊಡಗಿಕೊಳ್ಳುವುದನ್ನು ಕಾಣಬಹುದು. ಮಕ್ಕಳ ಹಿಂದೆ ಬಿದ್ದು ಅವರ ಎಲ್ಲ ಪರೀಕ್ಷೆಗಳನ್ನು ಸಮರ್ಥವಾಗಿ ಎದುರಿಸುವಲ್ಲಿ ಅವರ ಪಾಲಕರ ಯೋಗದಾನ ಮಹತ್ತರವಾದುದು. ಮಕ್ಕಳ ಪರೀಕ್ಷೆಗಾಗಿ ಪಾಲಕರು ಎಷ್ಟೊಂದೆಲ್ಲ ತ್ಯಾಗ ಮಾಡುತ್ತಾರೆ. ಮನೆಯಲ್ಲಿ ತಾವು ಟೀವಿ ನೋಡಿದರೆ ಮಕ್ಕಳೆಲ್ಲಿ ಟೀವಿ ನೋಡುತ್ತಾ ಕುಳಿತುಕೊಳ್ಳುತ್ತಾರೋ ಎಂಬ ಭಯದಿಂದ ಕೆಲವರ ಮನೆಯಲ್ಲಿ ಟೀವಿಯ ಕೇಬಲ್ ಅನ್ನೇ ಪರೀಕ್ಷೆ ಮುಗಿಯುವ ತನಕ ಕಟ್ಟು ಮಾಡುತ್ತಾರೆ. ಮದುವೆ ಸಮಾರಂಭ, ಇತರ ಕಾರ್ಯಕ್ರಮಗಳಿಗೆ ಹೋಗುವುದನ್ನು ಸಾಧ್ಯವಾದಷ್ಟು ಕಡಿಮೆ ಮಾಡುತ್ತಾರೆ. ಮಕ್ಕಳ ಪರೀಕ್ಷೆ ಎಂದರೆ ಒಂದು ರೀತಿಯಲ್ಲಿ ಕಠಿಣ ತಪಸ್ಸಿನಂತೆ. ಈಗ ಎಲ್ಲ ಕಡೆ ಕ್ರಿಕೆಟ್ ಜ್ವರ ಹಬ್ಬಿರೊದರಿಂದ ಮಕ್ಕಳ ಚಿತ್ತವನ್ನು ಓದಿನೆಡೆಗೆ ಕರೆದೊಯ್ಯುವುದು ಪಾಲಕರಿಗೆ ಬಹಳ ಕಷ್ಟದ ಕೆಲಸ. ಪರೀಕ್ಷೆ ಮುಗಿದ ಮೇಲೆ ಕೊನೆಗೆ ಬರುವ ಫಲಿತಾಂಶ ಪಾಲಕರ ಮತ್ತು ಮಕ್ಕಳ ಪರಿಶ್ರಮದ ಫಲವಾಗಿರುತ್ತೆ. ತಮ್ಮ ಮಕ್ಕಳನ್ನು ಡಾಕ್ಟರ್ ಮಾಡಿಸಬೇಕು, ಇಂಜಿನಿಯರ್ ಮಾಡಿಸಬೇಕು ಎಂದು ಎಷ್ಟೊಂದೆಲ್ಲ ಕನಸುಗಳನ್ನು ಕಟ್ಟಿಕೊಂಡಿರುತ್ತಾರೆ. ಆ ಕನಸುಗಳ ಸಾಕಾರಕ್ಕೆ ತಮ್ಮ ಸಮಯವೆಂಬ ಬಹು ಅಮೂಲ್ಯವಾದ ದೇಣಿಗೆಯನ್ನು ಕೂಡ ನೀಡುತ್ತಾನೆ.

ಪರೀಕ್ಷೆ ಎಂದರೆ ಆತಂತ, ಭಯ ಸಾಮಾನ್ಯ. ಅದು ಮಾನವ ಸಹಜ ಗುಣವೆಂಬಂತೆ ಒಬ್ಬ ವಿದ್ಯಾರ್ಥಿ ಎಷ್ಟೇ ಬುದ್ಧಿವಂತನಾಗಿದ್ರೂ, ಅವನು ಪರೀಕ್ಷೆಗಾಗಿ ಎಷ್ಟೇ ತಯಾರಿ ನಡೆಸಿದ್ದರೂ ಅವನ ಮನದ ಮೂಲೆಯಲ್ಲಿ ಪರೀಕ್ಷೆಯ ಬಗ್ಗೆ ಭಯ ಇದ್ದೇ ಇರುತ್ತದೆ. ನಮ್ಮಲ್ಲಿ ಒಂದು ಹೇಳಿಕೆ ಇದೆ. ಹೆಚ್ಚು ಓದಿದವರು ಪರೀಕ್ಷೆಯಲ್ಲಿ ಚೆನ್ನಾಗಿ ಬರೆಯುತ್ತಾರೆ. ಕಡಿಮೆ ಓದಿದವರು ಪರೀಕ್ಷೆಯನ್ನು ಎದುರಿಸಲು ಅಸಫಲರಾಗುತ್ತಾರೆ ಎಂಬುದು. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಇದು ತದ್ವಿರುದ್ಧವಾಗಿರೋದು ಇದೆ. ವರ್ಷ ಇಡೀ ಪರೀಕ್ಷೆಗಾಗಿ ತಯಾರಿ ಮಾಡಿದವರು ಪರೀಕ್ಷೆಯಲ್ಲಿ ಕಡಿಮೆ ಅಂಕಗಳನ್ನು ಪಡೆಯುವವರೂ ಇದ್ದಾರೆ. ಪರೀಕ್ಷೆಗಾಗಿ ಅಷ್ಟೊಂದು ತಯಾರಿ ಮಾಡದಿದ್ದವರು ಹೆಚ್ಚು ಅಂಕಗಳನ್ನು ಪಡೆದಿರುವ ಉದಾಹರಣೆಗಳೂ ಇವೆ. ಪರೀಕ್ಷೆಯ ಭಯ ಕನಸ್ಸಿನಲ್ಲೂ ಬಂದು ಕಾಡುತ್ತದೆ ಕೆಲವರಿಗೆ. ಎಲ್ಲರೂ ಪರೀಕ್ಷೆ ಬರೆಯಲು ಹೋದರೆ ನಾನು ಹೋಗದೆ ಇರೋದು, ತಾನು ಓದಿಕೊಂಡು ಹೋಗಿರೋದು ಒಂದು ವಿಷಯ, ಆ ದಿನ ಪರೀಕ್ಷೆ ಇದೋದೆ ಇನ್ನೊಂದು ವಿಷಯದ ಬಗ್ಗೆ ಹೀಗೆ ಪರೀಕ್ಷೆ ಹತ್ತಿರ ಬಂದಾಗ ಭಯದಿಂದ ವಿಧವಿಧವಾದ ಕನಸುಗಳು ಬೀಳುತ್ತದೆ. ಪರೀಕ್ಷೆಯನು ಬರೆಯಲು ಕೇವಲ ಓದಿದರೆ ಸಾಲದು. ಇದರೊಂದಿಗೆ ಬುದ್ಧಿವಂತಿಕೆ, ನಿಷ್ಠೆ, ಪ್ರಾಮಾಣಿಕತೆ ಹಾಗೂ ಪರೀಕ್ಷೆಯನ್ನು ಎದುರಿಸುವ ಆತ್ಮವಿಶ್ವಾಸದ ಅಗತ್ಯವಿದೆ. ಪರೀಕ್ಷೆಯಲ್ಲಿ ಹಲವಾರು ರೀತಿಯ ಪ್ರಶ್ನೆಗಳು ಎದುರಾಗುತ್ತವೆ. ಅವುಗಳಿಗೆ ಸಮಯೋಚಿತವಾಗಿ ಎದುರಿಸುವ ಜವಾಬ್ದಾರಿ ಮಕ್ಕಳ ಮೇಲಿರುತ್ತದೆ. ಕೆಲವೊಮ್ಮೆ ಪ್ರಶ್ನೆ ಪತ್ರಿಕೆಯ ಮೊದಲ ಪ್ರಶ್ನೆಯೇ ಕಠಿಣವಾಗಿ ಬಿಟ್ಟರೆ ಮಕ್ಕಳು ಭಯದಿಂದ ವಿಚಲಿತರಾಗಿ ಮುಂದೆ ಸುಲಭವಿರುವ ಪ್ರಶ್ನೆಗಳ ಉತ್ತರ ಅವರಿಗೆ ಮರೆತು ಹೋಗುವ ಸಾಧ್ಯತೆ ಇದೆ. ಮೊದಲಿಗೆ ತಮಗೆ ಗೊತ್ತಿರುವ ಪ್ರಶ್ನೆಗಳಿಗೆ ಉತ್ತರಿಸಬೇಕು. ಯಾವುದು ಕಠಿಣ ಅಂತ ಅನಿಸುತ್ತದೋ ಅದನ್ನು ಕೊನೆಯಲ್ಲಿ ಎತ್ತಿಕೊಳ್ಳಬೇಕು. ಸಮಯದ ಬಗ್ಗೆ ಗಮನಕೊಡಿ. ಒಂದೇ ಪ್ರಶ್ನೆಗೆ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳಬೇಡಿ.

ಮಕ್ಕಳ ಶೈಕ್ಷಣಿಕ ವರ್ಷ ಪ್ರಾರಂಭವಾದಾಗಲೇ ಪರೀಕ್ಷೆಗಾಗಿ ಮಾನಸಿಕ ಸಿದ್ಧತೆ ಮಾಡಿಕೊಂಡರೆ ಪರೀಕ್ಷೆಯ ಬಗ್ಗೆ ಆತಂಕ ಕಡಿಮೆ ಆಗುತ್ತದೆ. ಮುಕ್ತವಾದ ವಾತಾವರಣದಲ್ಲಿ ಕುಳಿತು ಅಧ್ಯಯನ ಮಾಡಿ, ನಿಮ್ಮದೇ ಆದ ಅಧ್ಯಯನ ಅಭ್ಯಾಸ ರೂಪಿಸಿಕೊಳ್ಳಿ. ಆದಷ್ಟು ಬಾಯಿಪಾಠದಿಂದ ಮಕ್ಕಳನ್ನು ದೂರವಿಡಿ. ಏಕಾಗ್ರತೆಯಿಂದ ಓದಿ ಮನನಮಾಡಿಕೊಳ್ಳಿ. ಓದುವುದರ ಜೊತೆಗೆ ಬರೆಯುವುದನ್ನೂ, ಪುನರಾವರ್ತನೆ ಮಾಡುವುದನ್ನು ರೂಢಿಸಿಕೊಳ್ಳಿ. ಪರೀಕ್ಷೆಯ ವೇಳಾಪಟ್ಟಿಗೆ ಅನುಗುಣವಾಗಿ ಯೋಜನೆಗಳನ್ನು ಹಾಕಿಕೊಂಡು ಓದಿರಿ. ಈ ವಿಷಯ ಕಠಿಣವೆಂದು ಎಂದು ಅದನ್ನು ಓದುವುದನ್ನು ಮುಂದೂಡಬೇಡಿ. ಅದಕ್ಕೆ ಸ್ವಲ್ಪ ಜಾಸ್ತಿ ಸಮಯ ಕೊಡಿರಿ.ಏನು ಓದುತ್ತೀರೋ ಅದನ್ನು ಒಂದೆರಡು ಸಲ ಬರೆದು ತೆಗೆದರೆ, ನಿಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದು ಬಿಡುತ್ತದೆ. ಕೆಲವರು ಖಾಲಿ ಓದುವುದನ್ನು ಮಾತ್ರ ಮಾಡಿದರೆ, ಪರೀಕ್ಷೆಯಲ್ಲಿ ಒಂದೆ ಸಲ ಬರೆಯಲಿಕ್ಕೆ ತೊಡಗಿದರೆ ಆ ಮೊದಲಿನ ಬರವಣಿಗೆಯ ವೇಗ ಸಾಧ್ಯವಾಗುವುದಿಲ್ಲ. ಸಮಯದ ಯೋಜನೆಯನ್ನು ಹಾಕಿಕೊಂಡು ಓದಬೇಕು. ದಿನದ ಇಪ್ಪತ್ತನಾಲ್ಕು ಗಂಟೆ ಓದಬಾರದು. ಮನೋರಂಜನೆಗಾಗಿ ಇಂತಿಷ್ಟು ಗಂಟೆ, ಓದಿದನ್ನು ಬರೆಯಲಿಕ್ಕೆ ಇಷ್ಟು ಗಂಟೆ ಅಂತ ಮೀಸಲಿಡಬೇಕು. ಆಗ ನಿಮ್ಮ ಮನಸ್ಸೂ ಕೂಡ ನಿರಾಳವಾಗುತ್ತದೆ. ಓದಿದ್ದು ನಿಮ್ಮ ನೆನಪಿನಲ್ಲಿರುತ್ತದೆ. ಹೆಚ್ಚಿನ ಮಕ್ಕಳ ಸಮಸ್ಯೆ ಒಂದೇ ಎಷ್ಟೇ ಓದಿದರೂ ನೆನಪಿನಲ್ಲಿ ಉಳಿಯೋದಿಲ್ಲ ಅನ್ನೋದು. ಓದಿನ ಜೊತೆಗೆ ನಿದ್ದೆನೂ ಅಷ್ಟೆ ಮುಖ್ಯ. ನಿದ್ದೆಕೆಟ್ಟು ಓದಿದರೆ ಏನೂ ಪ್ರಯೋಜನವಿಲ್ಲ. ಮಕ್ಕಳನ್ನು ಮಾನಸಿಕವಾಗಿ ಸದೃಢರನ್ನಾಗಿ ಮಾಡುವುದು ಎಲ್ಲ ಪಾಲಕರ ಆದ್ಯ ಕರ್ತವ್ಯವಾಗಬೇಕು.

**– ಡಾ. ಜ್ಯೋತಿ ಸತೀಶ್**

# ಇಲ್ಲೊಂದು ಆತ್ಮಕತೆ

ಈ ಮೊದಲೆ ಕರ್ನಾಟಕದಲ್ಲಿ ಹಲವಾರು, ಪತ್ರಿಕೆಗಳಾದ ಪ್ರಜಾವಾಣಿ, ವಿಜಯ ಕರ್ನಾಟಕ, ಕನ್ನಡ ಪ್ರಭ, ನವೋದಯ, ಇಂಡಿಯಾ ಟುಡೆ, ಮುಂತಾದ ಪತ್ರಿಕೆಯಲ್ಲಿ "ಗೊಂದಲಿಗ್ಯಾ" ಎ.ಎಂ. ಮದರಿಯವರ ಆತ್ಮಕತೆಯ ಬಗ್ಗೆ ಹಲವಾರು ಸಾಹಿತಿಗಳು ಮೆಚ್ಚುಗೆ ವ್ಯಕ್ತಪಡಿಸಿದ ಲೇಖನಗಳು ಬಂದಿವೆ. ಕರ್ನಾಟಕದಲ್ಲಿ ಈಗ ತುಂಬಾ ಪ್ರಸಿದ್ಧವಾಗುತ್ತ ಇರುವ ಆತ್ಮಕತೆ, ಮರಾಠಿ ದಲಿತಕತೆ, ಹೋಲುವ ಇದಲ್ಲದೆ ಈ ಕೃತಿಯ ಸಿನಿಮಾ ಶೂಟಿಂಗ್ ಕೂಡ ಮುಗಿದಿದೆ. 'ಅಮರದೇವ್' director ಬೆಂಗಳೂರು ಇವರ ನಿರ್ದೇಶನದಲ್ಲಿ.

ನನ್ನ ಗುರುಗಳಾದ ಎ.ಎಂ.ಮದರಿಯವರ ಪುಸ್ತಕ ವಿಮರ್ಶೆ, ಮಾಡುವಷ್ಟು ಪ್ರತಿಭಾನ್ವಿತ ನಾನಲ್ಲದಿದ್ದರೂ, ಅನಿಸಿಕೆಗಳನ್ನು ಹೊರಚೆಲ್ಲುವ ಹಂಬಲ ನನ್ನಲ್ಲಿದೆ.

ನನ್ನ ಗುರುಗಳಾದ ಎ.ಎಂ.ಮದರಿಯವರ ಪುಸ್ತಕ ವಿಮರ್ಶೆ ಮಾಡುವಷ್ಟು ಪ್ರತಿಭಾನ್ವಿತ ನಾನಲ್ಲದಿದ್ದರೂ ಅನಿಸಿಕೆಗಳನ್ನು ಹೊರಚೆಲ್ಲುವ ಹಂಬಲ ನನ್ನಲ್ಲಿದೆ.

ಪೈಥಾಗೊರಸನ ಪ್ರಮೆ, ಗಣಿತದ ಸೂತ್ರ, ವಿಜ್ಞಾನದ formula ಗಳನ್ನು ಹೇಳಿಕೊಡುತ್ತಿದ್ದ ಗುರುಗಳ ಜೀವನದಲ್ಲಿ ಇಷ್ಟೊಂದು ಜಟಿಲ ಸಮಸ್ಯೆಯಿಂದ ಶಿಕ್ಷಕರಾಗಿ ಮೇಲೆ ಬಂದದ್ದು ಅವರ ಆತ್ಮಕತೆಯನ್ನು ಮುಂಬೈಯಲ್ಲಿ ಓದಿದ ನಂತರವೆ ಗೊತ್ತಾಗಿದ್ದು, ಅದೆಷ್ಟು ಹಿಂಸೆ ಅನುಭವಿಸಿದ್ದಾರೆ. ಅಬ್ಬಬ್ಬಾ ಓದಿದರೆ ಮೈ ನರಗಳೆಲ್ಲ ರೋಮಾಂಚನವಾಗುತ್ತವೆ.

ಪುಟ್ಟಿಯಲ್ಲಿ ಸ್ಟೆಶನರಿ ಸಾಮಾನು ಹೊತ್ತು ಮಾರುವ ಅವ್ವನಹಿಂದೆ ಹಳ್ಳಿ ಹಳ್ಳಿಗೆ ಹೋಗುವ ಸೂಕ್ಷ್ಮ ಗ್ರಹಿಕೆಯ ಲೇಖಕರು ಅವ್ವನ ಗರ್ಭಪಾತದ ಹೃದಯಸ್ಪರ್ಶಿ ಘಟನೆಗಳ ತಟ್ಟುವಿಕೆ ಇದೆಯಲ್ಲ, ಅದು ಓದುಗರ ಮನಸ್ಸನ್ನು ತಟ್ಟುತ್ತದೆ.

ಕೆಲವಾರು ಗುರುಗಳಿಂದ ಹಲವಾರು ಗೆಳೆಯರಿಂದ ವಿಕೃತ ಭಾವನೆಯ ಮತ್ತಲವಾರು ಮನಸ್ಸಿನ ಸಮಾಜದಲ್ಲಿಯೂ ಸಹ ಅನುಭವಿಸಿದ ರೀತಿ ಮನಸ್ಸಿಗೆ ತುಂಬಾ ನೋವುಂಟು ಮಾಡುತ್ತದೆ. ಅವರ ಸಹನಶಕ್ತಿ ಅದೆಂತ ಗಟ್ಟಿಯಾದದ್ದು ಆಶ್ಚರ್ಯ, ಆದರೂ ಸತ್ಯ.

ಸಹಪಾಠಿ ತಿಮ್ಮನಗೌಡ (ದೊಡ್ಡವರ ಮೊಮ್ಮಗ)ನ ಕಳ್ಳತನವನ್ನು ಇವರ ಮೇಲೆ ಹೇರಿ ಅಮಾಯಕ, ನಿರ್ದೂಷಿಯಾದ ಲೇಖಕರನ್ನು ಕಂಬಕ್ಕೆ ಕಟ್ಟಿ ಬಡಿಯುವ ರೀತಿ, ಸಮಾಜದಲ್ಲಿರುವ ಮೇಲ್ವರ್ಗದವರ ಸೊಕ್ಕಿನ ದುರ್ನಡತೆಯನ್ನು ತೋರಿಸುತ್ತವೆ. ಆಗ ಸಹಾಯಕ್ಕೆ ಬಂದ ಜಾಲಿಹಾಳ ಗುರುಗಳು ಮತ್ತು ಮಠದಲ್ಲಿಯ ಕಾಳಪ್ಪ. ಅವರ ಕರುಣೆಯಿಂದ ಮನೆಗೆ ಬಿಡುವ ರೀತಿ, ಇಲ್ಲಿ ಕಾಳಪ್ಪನ ಮಾತುಗಳನ್ನು ಲೇಖಕರು ಹಿಡಿದಿಟ್ಟಿದ್ದು ಮೆಚ್ಚುವಂತಹವು, ಬಡವರ ಮಕ್ಳು ಅಂದ್ರ ಕಳ್ರಂತ ತಿಳಿಕೊಂಡಾರ, ದುಡ್ಡಿದ್ದ ಸೂಳೆಮಕ್ಳು ಅಂದ್ರೆ ಯಾಕ್ ಉಳಿದವರನ್ನು ಬಡಿಬೇಕಿತ್ತು, ಆ ಗಂಡಸತನ ತೋರಿಸಬೇಕು, ಹಿಂದ ಮುಂದ ಕೊಳುವರಿಲ್ಲಾಂತ, ಇಂಥ ಭಿಕಾರಿಗಳ ಮ್ಯಾಲ ತಾಕತ್ತ ತೋರಿಸಿತಾರ, ಎನ್ನುವ ಮಾತುಗಳು, ಬಡವನ ಕೋಪ ದವಡೆಗೆ ಮೂಲ' ಎನ್ನುವಂತೆ ಹೊಟ್ಯಾಗಿನ ಸಿಟ್ಟು ರಟ್ಯಾಗಿಲ್ಲ ಎನ್ನುವ ಮಾತಿಗೆ ಪುಷ್ಠಿ ಕೊಡುತ್ತದೆ. ಬಡವರು ಎಲ್ಲವನ್ನೂ ಸಹಿಸಿಕೊಳ್ಳಲೇಬೇಕಾದಂತೆ ಪರಿಸ್ಥಿತಿಯನ್ನು ಚಿತ್ರಿಸುತ್ತದೆ. ತಾಯಿ ಸಹ ಹೆದರಿ ಮನಗ ತಪ್ಪು ಇರದಿದ್ದರೂ ಬಡಿದವರ ಮನೆಗೆ ಕಾಲಿಗೆ ಬಿದ್ದು, ಹುಡುಗ ತಿಳಿದಾ ತಪ್ಪು ಮಾಡ್ಯೆತಿ, ಮತ್ತೆ ಹೊಡೆದು, ಸಾಯಸಬೇಡ್ರಿ ಎನ್ನುವ ಧೀನತೆ ಕರುಳು ಕಿತ್ತು ಬರುವಂತೆ ಮಾಡುತ್ತದೆ.

ಮತ್ತೊಂದು ಪ್ರಸಂಗ, ಮೇಲ್ವರ್ಗದ ಮಕ್ಕಳು ಕೆಳವರ್ಗದ ಮಕ್ಕಳ ಜೊತೆ ಆಡುವ ಅಟ್ಟಹಾಸನ ನಡವಳಿಕೆಗೆ ಕನ್ನಡಿ ಹಿಡಿದಂತಿದೆ, ಬಸಯ್ಯ ಗುಡಿ ಪೂಜಾರಿಯ ಮಗ ಮತ್ತು ಖಾಜಾಮರ ಇವರಿಂದ ಅನುಭವಿಸಿದ ರ್ಯಾಗಿಂಗ್ ಅಂದಿನ ಕಾಲಕ್ಕೆ ಲೇಖಕರು ಅನುಭವಿಸಿದ ಬತ್ತಲೆ ಆಟ ಮನ ಮಿಡಿಯುತ್ತದೆ.

ಇನ್ನೊಂದು ಘಟನೆ ಹಕ್ಕಪಕ್ಕಿಯವರ ಶ್ರೀಮಂತ ಹುಡುಗ ಗಟ್ಟಿಯಾದ ಕಟ್ಟಿಗೆಯಿಂದ ಮೊಣಕಾಲಿಗೆ ಮತ್ತು ಡಬ್ಬಕ್ಕೆ ಹೊಡೆದದ್ದು ಆಗ ಅನುಭವಿಸಿದ ಯಾತನೆ ಅವರಿಗಾದ ನೋವು, ಮಗದೊಂದು ಪ್ರಸಂಗ, ಹೊಳೆಯ ದಂಡೆಯ ಮೇಳೆ ಆದ ಮತ್ತದೆ ಸಿರಿವಂತರ ಮಕ್ಕಳಿಂದ ಲೇಖಕರನ್ನೂ ನೂಕಿದಾಗ ಅಲ್ಲೆ ಇರುವ ಆರೇಳು ಇಂಚು ಇರುವ ಬೊಡ್ಡೆಯು ಅವರ ತೊಡೆಗೆ ನಾಟಿ ಸುಮಾರು ಮಾಂಸ ಅಲ್ಲಿಯೆ ಬಿದ್ದು ಮೂರ್ಛೆ ಹೋದದ್ದು, ಓದುಗರಿಗೆ, ನಮಗರಿವಿರದಂತೆ ಕಣ್ಣೀರು ದಳದಳ ಹರಿಯುತ್ತವೆ.

ಅವ್ವನ ಅಳು, ತಂದೆಯ ಅಸಹಾಯಕತೆಯ ಮಾತು "ನಾವು ಈ ದರಿದ್ರ ಜಾತಿಯೊಳಗೆ ಹುಟ್ಟಿದ್ದರಿಂದ ಯಾರ್ ಏನ್ ಮಾಡಿದ್ರು ಜೀವಲ್ದಂಗಿರಬೇಕಾಗೈತಿ' ಎಂಬ ಮಾತುಗಳು, ಹೃದಯ ಸ್ಪರ್ಶಿಸುವಂತೆ, ವಿಚಾರಕ್ಕೀಡು ಮಾಡುತ್ತವೆ.

ಹೀಗೆ ದಾರ್ಜನ್ಯ ನಡೆಸಿದ ಎಷ್ಟೋ ಕುಟುಂಬಗಳು ಹೇಳ ಹೆಸರಿಲ್ಲದಂತಾಗಿದ್ದು, "ಕಾಲ ಎನ್ನುವುದು ದೊಡ್ಡ ನ್ಯಾಯಾಧೀಶ" ಎನ್ನುವ ಲೇಖಕರ ಮಾತು ಬಹು ಅರ್ಥಗರ್ಭಿತವಾಗಿದೆ. ಸಮಾಜದಲ್ಲಿ ಎಂತಹ ಕ್ರೂರ ಮನಸ್ಸಿನ, ವಿವೇಚನೆ ಇಲ್ಲದ ಮನುಷ್ಯ ಮನುಷ್ಯರ ನಡುವಿನ ಭಾವನೆಯ ಕೊರತೆ, ನನಂತೆ ಅವರು ಸಹ ಅವರಿಗಾದ ಸ್ಥಿತಿ ನನಗೆ ಆಗಿದ್ದರೆ? ಅವರಂತೆ ನಾನು ನೋವು ಅನುಭವಿಸಿದ್ದರೆ? ಎಂದು ಯೋಚಿಸಿದರೆ ಕೆಳದರ್ಜೆಯವರ ಮೇಲೆ ಮನಬಂದಂತೆ ನಡೆದುಕೊಳ್ಳುವ ಇಂತಹ ವಿಕೃತ ಮನಸ್ಸುಗಳಿಗೆ ಧಿಕ್ಕರವಿರಲಿ.

ತಾಯಿಯೂ, ಕ್ಯಾನ್ಸರಿಂದ ಬಳಲುವಿಕೆ, ತಾಯಿ ಅನುಭವಿಸಿದ ಯಾತನೆ, ಎಂತಹವರಿಗೂ ಕರುಳು ಕಿತ್ತು ಬರುತ್ತದೆ. ತಂದೆ ಜನಪದ ಕವಿಯಾಗಿ, ನಾಟಕಕಾರನಾಗಿ ಆಶುಕವಿಯಾಗಿದ್ದರೂ, ಅವರ ಅವರ ಜಾತಿಯ ಜನರಲ್ಲೆ ಅಪರೂಪದವರಾಗಿದ್ದರೂ ಸಹ ಮೇಲೆ ಬರಲು ಆಗಲಿಲ್ಲ ಎನ್ನುವ ನೋವು ಲೇಖಕರಲ್ಲಿದೆ.

ಜಾತೀಯತೆಯಿಂದ ಎಷ್ಟೊಂದು ಜನರಿಂದ ಅವಮಾನಗೊಂಡಿದ್ದಾರೆ ಬೇರೆ ಯಾರಾದರೂ ಅವರ ಸ್ಥಾನದಲ್ಲಿದ್ದಿದ್ದರೆ ಭ್ರಮ ನಿರಸನರಾಗುತ್ತಿದ್ದರು. ದೈಹಿಕವಾಗಿ, ಮಾನಸಿಕವಾಗಿ, ಆಘಾತಗೊಳಿಸಿದ ಇಂತಹ ಸಮಾಜದ ಎದುರೆ – ಅವೇ ಊರಲ್ಲ, S.S.L.C. ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿ, ಮುಂದೆ ಕಾಲೇಜು, ವಿದ್ಯಾಭ್ಯಾಸ ಮುಗಿಸಿದ ಲೇಖಕರ ತಾಯಿಗೆ "ನಿನ್ನ ಮಗ ಶಾಣ್ಯಾ" ಅದಾನ ಮುಂದ, ನಿನಗ ಸುಖವಾಗಿಡತಾನ ಎನ್ನುವ ಓಣಿಯವರ ಮತು ಕೇಳಿದ ಸಂತೋಷ ಮಾತ್ರ ತಾಯಿಯದು.

ಒಂದು ದಿನ ಸುಖಕಾಣದ ಅವ್ವ, ನಡುವಯಸ್ಸಿನಲ್ಲಿ ಮಣ್ಣಾಗಿದ್ದು, ಎಂತಹವರಿಗೂ ಕೆಟ್ಟ ಅನಿಸುತ್ತದೆ. ತಾವು ಮಗನ ಸುಖ ಕಾಣದಿದ್ದರೂ ಸಮಾಜ ಗುರುತಿಸುವಂತ ಒಬ್ಬ ಅಪ್ರತಿಮ, ಪುತ್ರನನ್ನು ಕೊಟ್ಟಂತ ಹೆಗ್ಗಳಿಕೆ ಆ ಮಾತಿಗೆ ಸಲ್ಲುತ್ತದೆ.

ಇಂತಹ ಗುರುಗಳು ನನ್ನ ತವರೂರಾದ ಕನಕಗಿರಿಯಲ್ಲಿ 1947 ರಿಂದ 1985 ರವರೆಗೆ ಹನ್ನೊಂದು ವರುಷಗಳ ಸೇವೆ ಸಲ್ಲಿಸಿದ್ದಾರೆ, ಒಬ್ಬೊಬ್ಬರ ಮನೆಯಲ್ಲಿ 3–4 ವಿದ್ಯಾರ್ಥಿಗಳಂತೆ ಇವರ ಬೋಧನೆಯನ್ನು ಪಡೆಯುವ ಅವಕಾಶ ದೊರೆತದ್ದು ನಮ್ಮೆಲ್ಲರ ಭಾಗ್ಯ ಎಂದೇ ಹೇಳುತ್ತೇವೆ.

ಗುರುಗಳು ಪಾಠ ಮಾಡುವ ರೀತಿ ತುಂಬಾ ಅಚ್ಚುಕಟ್ಟಾಗಿತ್ತು. ಅವರ memory power ತುಂಬಾ ತೀಕ್ಷ್ಣವಾದದ್ದು, ಎಷ್ಟು GB ಅಂತ ಗೊತ್ತಿಲ್ಲ. ಅಂತಹ memory card ಅವರ ಮೆದುಳಿನಲ್ಲಿದೆ. ಶಿಸ್ತು, ನಿಷ್ಠಾವಂತ ಸೇವೆ, ಶ್ರಮ ಜೀವಿಗಳಾಗಿದ್ದರೂ, ವಿಜ್ಞಾನದ ಶಿಕ್ಷಕರಾಗಿದ್ದರೂ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉತ್ತಮ ಕೊರಿಯೋಗ್ರಾಫರ್ ಆಗಿದ್ದರು. ಹಲವಾರು ವಿಮರ್ಶೆ, ಕತೆಗಳನ್ನು ಬರೆಯುತ್ತಿದ್ದರು.

KAS ಪರೀಕ್ಷೆ ಪಾಸು ಮಾಡೀ ಉನ್ನತ ಅಧಿಕಾರಿಯಾಗಿ ಸೇವೆ ಸಲ್ಲಿಸಿದ ಇವರು 'ಗೊಂದಲಿಗ್ಯಾ' ಆತ್ಮಕತೆಯನ್ನು ಅತ್ಯಂತ ಪ್ರಾಮಾಣಿಕವಾಗಿ ಯಾವುದೇ

(ಪುಟ 6ಕ್ಕೆ)

✍ ಲಲಿತಾ ಪಿ. ಅಂಗಡಿ

# ಹದಿನಾಲ್ಕನೆಯ ತಿರುವು

ಆಕಾಶನ ಎಂಗೇಜ್‌ಮೆಂಟ್ ಪೂರೈಸಿ ಊಟ ಮಾಡಿ ಹೊರಬರುವ ಹೊತ್ತಿಗೆ ಗಂಟೆ ನಾಲ್ಕಾಗಿತ್ತು. ಆಗುಂಬೆಯ ಹದಿನಾಲ್ಕನೆಯ ತಿರುವು ಇಲ್ಲಿಂದ ಕಾಲ್ನಡಿಗೆಯ ದೂರ. ಹೇಗೂ ಸಂಜೆಯ ಹೊತ್ತು ಸೂರ್ಯಾಸ್ತ ವೀಕ್ಷಿಸದೆ ಕೆಲವು ದಿನಗಳಾದವು. ಕ್ಯಾಮೆರಾ ಹೇಗೂ ಜೊತೆಯಲ್ಲೇ ಇದೆ. ಹೋಗಿ ಬಂದರಾಯಿತು ಅಂತ ಆ ಕಡೆ ಹೆಜ್ಜೆ ಹಾಕಿದೆ.

ಈ ತಿರುವಿನಲ್ಲಿ ನಿಂತು ಸೂರ್ಯಾಸ್ತದ ಫೋಟೋಗಳನ್ನು ತೆಗೆಯುತ್ತಿರುವುದು ಇದು ಮೊದಲ ಬಾರಿ ಏನೂ ಅಲ್ಲ. ಹಾಗಂತ ಈ ಸಲ ಮಾತ್ರ ಫೋಟೋ ತೆಗೆಯುವಾಗ ಎದುರಿನ ದೃಶ್ಯ ನೋಡಿ ಮೈ ಜುಂ ಎನ್ನಿಸಿತು! ಒಂದು ಹೆಣ್ಣು; ಅಲ್ಲ, ಒಂದು ಹೆಣ್ಣಿನಾಕೃತಿಯ ಬೆಳಕು ಪದೇ ಪದೇ ನನ್ನ ಕ್ಯಾಮರಾಕ್ಕೆ ಎದುರಾಗಿ ಬರುತ್ತಿತ್ತು! ಕ್ಯಾಮರಾದಿಂದ ಮುಖವನ್ನು ಹೊರಗೆ ಹೊರಳಿಸಿ ನೋಡಿದರೆ ಒಂದು ನರಪಿಳ್ಳೆಯೂ ತೋರದೆ ಎಲ್ಲವೂ ಸರ್ವೇ ಸಾಮಾನ್ಯವಾಗಿ ಕಾಣುತ್ತಿತ್ತು. ಫೋಟೋ ತೆಗೆಯಲು ಕ್ಯಾಮರಾವನ್ನು ಪುನಃ ಸೆಟ್ ಮಾಡುತ್ತಿದ್ದಂತೆಯೇ ಮತ್ತದೇ ಹೆಣ್ಣಿನಾಕೃತಿಯ ಬೆಳಕು ಕ್ಯಾಮರಾಕ್ಕೆ ಎದುರಾಗುತ್ತಿತ್ತು! ಹಾಗಂತ ನಾನೇನೂ ಗಾಬರಿಗೊಳ್ಳಲಿಲ್ಲ. ವೃತ್ತಿಯಿಂದ ನಾನೊಬ್ಬ ಪೊಲೀಸ್ ಇನ್ಸ್‌ಪೆಕ್ಟರ್. ಪ್ರವೃತ್ತಿಯಿಂದ ಮಾತ್ರ ಫೋಟೋಗ್ರಾಫರ್. S.S.L.C. ಯಲ್ಲಿ ರ‍್ಯಾಂಕ್ ಬಂದಾಗ ಬೆಂಗಳೂರಿನಿಂದ ಮಾವಯ್ಯನವರು ಒಂದು Auto ಕ್ಯಾಮರಾ ಹಾಗೂ ಮೂರು ರೀಲ್‌ಗಳನ್ನು ಖುಷಿಯಿಂದ ಕಳುಹಿಸಿಕೊಟ್ಟಿದ್ದರು. ಆ ದಿನದಿಂದ ನಸುಕಿನಲ್ಲೇ ಎದ್ದು ಕ್ಯಾಮರಾವನ್ನು ಹೆಗಲಿಗೇರಿಸಿಕೊಂಡು ಮನೆಯಿಂದ ಹೊರ ಬೀಳುವುದು ಅಭ್ಯಾಸವಾಗಿ ಬಿಟ್ಟಿತು. ಬರ ಬರುತ್ತಾ ಒಬ್ಬ ನುರಿತ ಫೋಟೋಗ್ರಾಫರ್ ಆಗಿ ಪರಿಚಯಿಸಲ್ಪಟ್ಟು ಆಗೊಮ್ಮೆ ಈಗೊಮ್ಮೆ ಮದುವೆ ಮುಂಜಿ ಅಂತ ಫೋಟೋ ತೆಗೆಯಲು ಆಮಂತ್ರಣ ಬರತೊಡಗಿದವು. ಹಾಗಾಗಿ ಸ್ವಂತ ಲ್ಯಾಬ್ ಕೂಡಾ ಇಟ್ಟೆ.

ಪೊಲೀಸ್ ವೃತ್ತಿ- ಫೋಟೋಗ್ರಾಫಿ ಹಾಗೂ ಕತ್ತಲೆ-ಬೆಳಕು; ಇವು ಬದುಕಿನ ಅವಿಭಾಜ್ಯ ಅಂಗವಾಗಿ ನನ್ನ ಜೀವನದಲ್ಲಿ ಹಾಸು ಹೊಕ್ಕಾಗಿ ಹೆಣೆದುಕೊಂಡವು. ಬೆಳಕಿನಲ್ಲಿ ತೆಗೆದ ಫೋಟೋಗಳನ್ನು ಕತ್ತಲೆ ಕೋಣೆಯಲ್ಲಿ ತೊಳೆಯುವುದು. ಕಗ್ಗತ್ತಲ ರಾತ್ರಿಯಲ್ಲಿ ನಡೆದ ಸಂಚು ಕೊಲೆ ಸುಲಿಗೆಗಳನ್ನು (ಸಾಮಾನ್ಯವಾಗಿ ಇಂತಹ ದುಷ್ಕೃತ್ಯಗಳು ನಡೆಯುವುದು ರಾತ್ರಿ ಹೊತ್ತಿನಲ್ಲೇ) ಹಗಲು ಹೊತ್ತಿನಲ್ಲಿ ಪರಿಶೀಲಿಸುವುದು ಹೀಗೆಯೇ ದಿನಗಳು ಉರುಳುತ್ತಿದ್ದವು.

ಹಾಗಂತ ಇಂತಹ ಒಂದು ಸನ್ನಿವೇಶ ನನ್ನ ಬದುಕಿನಲ್ಲಿ ಬಂದದ್ದು ಇದೆ ಮೊದಲು. ಹೇಗೂ ಆಯಿತು. ಕ್ಯಾಮರ ಕ್ಲಿಕ್ ಮಾಡಿಯೇ ಬಿಡುವುದು. ಆಮೇಲಿನ ವಿಷಯ ಆಮೇಲೆ ಅಂತ ವಿವಿಧ ಭಂಗಿಯಲ್ಲಿ ನಾಲ್ಕು ಐದು ಫೋಟೋಗಳನ್ನು ತೆಗೆದೆ. ಎಲ್ಲಾ ಫೋಟೋಗಳಲ್ಲೂ ಆ "ಬೆಳಕು" ಕಾಣಿಸಿಕೊಂಡಿತು. ಮತ್ತೆ ಅದೇಕೋ ಅಲ್ಲಿ ಹೆಚ್ಚು ಹೊತ್ತು ನಿಲ್ಲಲು ಮನಸ್ಸು ಒಪ್ಪಲಿಲ್ಲ. ಲ್ಯಾಬ್‌ಗೆ ಹೋಗಿ ರೋಲ್ ತೊಳೆದು ನೋಡುವುದು ಅಂತ ಯೋಚಿಸಿ ಅಲ್ಲಿಂದ ನಿರ್ಗಮಿಸಿದೆ. ಮನೆಗೆ ಬಂದವನೇ ಡಾರ್ಕ್ ರೂಮಿಗೆ ತೆರಳಿ ರೀಲ್ ತೊಳೆದು ನೋಡಿದೆ. ಡೆವಲಪ್ ಹಾಗೂ ಪ್ರಿಂಟ್ ಮಾಡಿಯೂ ನೋಡಿದೆ! ಎಲ್ಲಾ ಚಿತ್ರಗಳಲ್ಲೂ ಹೆಣ್ಣಿನಾಕೃತಿಯ ಬೆಳಕು! ಹುಡುಗಿಯ ಆಕಾರದಲ್ಲಿ ಭೂತ-ಪ್ರೇತಗಳನ್ನು ನೆನಪಿಸುವ ಬೆಳ್ಳಂ ಬೆಳಕು! ಅದಿಷ್ಟು ಬಿಟ್ಟರೆ ಫೋಟೋಗಳಲ್ಲಿ ಮತ್ತೆಲ್ಲ ಸಾಮಾನ್ಯವಾಗಿತ್ತು.

ಆ ರಾತ್ರಿ ನನಗೆ ಬಹಳ ಹೊತ್ತು ನಿದ್ದೆ ಬರಲಿಲ್ಲ. ಏನೇನೋ ಆಲೋಚನೆಗಳು ಬರತೊಡಗಿದವು. ಅವುಗಳಿಂದ ಬಿಡುಗಡೆ ಹೊಂದಲು ಬಲತ್ಕಾರದ ನಿದ್ದೆಗೆ ಜಾರಿಕೊಂಡೆ. ನಿದ್ದೆಯಲ್ಲೂ ಕನಸುಗಳು! ಒಂದಂತೂ ನನ್ನ ಸ್ಮೃತಿ ಪಟಲದಲ್ಲಿ ಮರೆಯಾಗದಂತೆ ಮುದ್ರೆಯೊತ್ತಿ ಹಾಗೆಯೇ ಜಾರಿಕೊಂಡಿತು. ಅಸ್ಪಷ್ಟವಾಗಿದ್ದ ಆ ಹೆಣ್ಣುರೂಪದ ಬೆಳಕು ನಿಧಾನವಾಗಿ ನಿಚ್ಚಳವಾಗುತ್ತಾ ಬಂದು ಕೊನೆಗೆ ಸ್ಥಿರವಾಗಿ ಬಾಗಿಲಲ್ಲಿ ನಿಂತಿತು! ಹೌದು, ಅನುಮಾನವಿಲ್ಲ. ನನ್ನ ಪರಿಚಯದ ಹುಡುಗಿಯೇ. ಹೆಸರು ರೂಪಾ ಅಂತ. ಹೊಟ್ಟೆ ಉಬ್ಬಿದೆ; ಬಹುಶಃ ಮೂರು ತಿಂಗಳು ಮಿಕ್ಕಿರಬೇಕು. ನಿನ್ನೆ ಎಂಗೇಜ್‌ಮೆಂಟ್‌ಗೆ ಹೋಗಿ ಬಂದ ಆಕಾಶನಿಗೆ ಗೊತ್ತಾದ ಹುಡುಗಿ. ನಿಶ್ಚಿತಾರ್ಥವಾಗಿ ಕೆಲವೇ ತಿಂಗಳಲ್ಲಿ ಮದುವೆಯೂ ಆಗುವುದಿತ್ತು. ಆದರೆ ಆಕಸ್ಮಿಕವೋ ಎಂಬಂತೆ ಅದೊಂದು ದಿನ ಶೃಂಗೇರಿಯಲ್ಲಿದ್ದ ಅಕ್ಕನ ಮನೆಗೆ ಹೋಗಿ ಬರುತ್ತೇನೆ ಅಂತ ಹೇಳಿ ಹೋದವಳು ಅತ್ತ ಅಕ್ಕನ ಮನೆಯನ್ನೂ ತಲುಪಲಿಲ್ಲ! ಇತ್ತ ಮನೆಗೂ ಹಿಂತಿರುಗಲಿಲ್ಲ. ಒಂದೆರಡು ದಿನಗಳ ಅವಧಿಯಲ್ಲಿ ಆಕೆಯನ್ನು ನೋಡಿದ್ದೇನೆ ಎನ್ನುವ ಯಾರೊಬ್ಬರೂ ಕಾಣದಿದ್ದಾಗ ಆಕೆಯ ಮನೆಯವರು ನಾನು ಕೆಲಸಕ್ಕಿದ್ದ ಪೊಲೀಸ್ ಸ್ಟೇಷನ್‌ನಲ್ಲಿ 'FIR Note' ಮಾಡಿದ್ದರು. ಆಕೆ ಎಲ್ಲಾದರೂ ಅವಘಡದಲ್ಲಿ ಸತ್ತಳೋ, ಕೊಲೆಯಾದಳೋ. ಅತ್ಯಾಚಾರಕ್ಕೆ ಬಲಿಯಾಗಿ ಆತ್ಮಹತ್ಯೆ ಮಾಡಿಕೊಂಡಳೋ ಅಥವಾ ಯಾರಾದರೂ ಅಪಹರಿಸಿದರೋ ಹೇಗೆ ಎಂಬ ಹತ್ತು ಹಲವು ವಿಚಾರಗಳು ಜನರ ಬಾಯಿಗೆ ಗ್ರಾಸವಾದುದನ್ನು ನಾನು ಹಲವು ಬಾರಿ ಕಂಡಿದ್ದೆ. ಹಾಗಂತ ಕಳೆದ ಕೆಲವು ತಿಂಗಳಲ್ಲಿ ಆಕೆ ಬದುಕಿದ್ದಾಳೆ ಎಂಬ ಯಾವ ಕುರುಹೂ ದೊರೆಯದೆ ಕೇಸು ಪೇಲವವಾಗಿತ್ತು. ಆಕಾಶ ಹಾಗೂ ರೂಪ ನೆರೆ ಹೊರೆಯವರಾಗಿದ್ದು ಚಿಕ್ಕಂದಿನಿಂದಲೂ ಒಡನಾಡಿಗಳಾಗಿ ಅನ್ಯೋನ್ಯವಾಗಿದ್ದುದರಿಂದ ಆಕಾಶನ ಮೇಲೆ ಎಳ್ಳಷ್ಟೂ ಸಂಶಯವಿರಲಿಲ್ಲ. ಬಹು ಸಾಧು ಸ್ವಭಾವದ ಆಕಾಶ ತಾನಾಗಿಯೇ ರೂಪಾಳ ಮನೆಯವರೊಂದಿಗೆ ಮಾತನಾಡಿ ಮದುವೆಗೆ ಒಪ್ಪಿಗೆ ಪಡೆದಿದ್ದ. ಮಾತ್ರವಲ್ಲ ಮನೆ ಎರಡು; ಅಂಗಳ ಒಂದು ಎಂಬಂತಿದ್ದ ಆ ಎರಡು ಮನೆಗಳ ಸಂಬಂಧವೂ ಉತ್ತಮವಾಗಿತ್ತು. ಹೀಗಿರುವಾಗ ಹುಡುಗನ ಬಗ್ಗೆ ಸಂಶಯ ತಾಳುವುದು ಶುದ್ಧ ತಪ್ಪು ಎನ್ನುವ ಕಲ್ಪನೆ ಎಲ್ಲರಲ್ಲೂ ಮನೆ ಮಾಡಿತ್ತು. ಇದಾದ ಕೆಲವು ತಿಂಗಳು ಬಿಟ್ಟು ಆಕಾಶ ತನ್ನ ಹತ್ತಿರದ ಸಂಬಂಧದಲ್ಲಿ ಹುಡುಗಿಯನ್ನು ನೋಡಿ ನಿಶ್ಚಿತಾರ್ಥ ಇಟ್ಟುಕೊಂಡಿದ್ದ. ನಾನು ನಿನ್ನೆಯ ದಿನ ಹೋಗಿ ಬಂದದ್ದೇ ಆ ನಿಶ್ಚಿತಾರ್ಥಕ್ಕೆ.

✍ ಜಿ.ವಿ. ಕಂಚುಗಾರ

ನಿಶ್ಚಿತಾರ್ಥಕ್ಕೆ ತಪ್ಪದೆ ಬರಬೇಕು. ಹಾಗೆ ಬರುವಾಗ ಕ್ಯಾಮರ ತರಲು ಮರೆಯಬಾರದು. ಬೇರೆ ಯಾವ ಫೋಟೋಗ್ರಾಫರಿಗೂ ಹೇಳಿಲ್ಲ. ನೀವೇ ಆ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿಕೊಡಬೇಕು ಎಂದು ಸ್ವತಃ ಮನೆಗೆ ಬಂದು ಆಕಾಶ ಹೇಳಿಕೆ ಕೊಟ್ಟು ಹೋಗಿದ್ದ. ಹೋಗದಿರಲು ಆದೀತೇ? ಆಯಿತು ಅಂತ ಮಾತುಕೊಟ್ಟೆ. ಹೋಗುವಾಗ ಕ್ಯಾಮರಾವನ್ನು ಹೆಗಲಿಗೇರಿಸಿಕೊಂಡೇ ಹೋಗಿದ್ದೆ.

"ಒಳಗೆ ಬರಲೇ" ಅಂದಂತಾಗಿ ಕನಸಿನಲ್ಲೂ ಬೆಚ್ಚಿ ಬಿದ್ದೆ. ರೂಪ ನನ್ನೆದುರು ಬಂದು ನಿಂತುಕೊಂಡಳು. ಹಾಗೆಯೇ ತನ್ನ ಮನದಳಲನ್ನು ತೋಡಿಕೊಂಡಳು.

"ನಿನ್ನೆಯ ದಿನ ನೀನು ಹದಿನಾಲ್ಕನೆಯ ತಿರುವಿಗೆ ಬಂದು ಫೋಟೋ ತೆಗೆಯುತ್ತಿದ್ದಾಗ ನಿನ್ನ ಕ್ಯಾಮರಾದಲ್ಲಿ ಕಾಣಿಸಿಕೊಂಡವಳು ನಾನೇ. ಸದ್ಯ ನಾನು ಜೀವಂತವಾಗಿಲ್ಲ. ಅದೇ ಹದಿನಾಲ್ಕನೆಯ ತಿರುವಿನ ಮಹಾಪ್ರಪಾತದಲ್ಲಿ ಬಿದ್ದು ಇಹಲೋಕದ ಯಾತ್ರೆ ಮುಗಿಸುವಂತಾಯಿತು. ಇದಕ್ಕೆಲ್ಲ ಕಾರಣ ಬೂದಿಮುಚ್ಚಿದ ಕೆಂಡದಂತಿರುವ ಆ ಆಕಾಶ ! ಅವನು ನನಗೆ ದ್ರೋಹ ಬಗೆದ! ನನ್ನನ್ನೇ ಮದುವೆಯಾಗುವುದಾಗಿ ಮಾತು ಕೊಟ್ಟು ವಂಚಿಸಿದ. ನಾನು ಗರ್ಭಿಣಿಯಂತ ಗೊತ್ತಾದಾಗ ಹೆದರಬೇಕಾದ್ದಿಲ್ಲ, ಕೂಡಲೇ ಮದುವೆಯಾಗುವ; ನಾನು ನಿಮ್ಮ ಮನೆಯವರಲ್ಲಿ ಮಾತನಾಡುತ್ತೇನೆ ಅಂತ ಭರವಸೆ ಇತ್ತು ಮದುವೆಯ ದಿನವನ್ನು ಗಟ್ಟಿ ಮಾಡಿದ! ಹಾಗೆಯೇ ಆ ದಿನ....

ನಾನು ಅಕ್ಕನ ಮನೆಗೆ ಹೋಗಿ ಬರುತ್ತೇನೆ ಅಂತ ಹೇಳಿ ಮನೆಯಿಂದ ಹೊರಟ ದಿನ; ದಾರಿ ಮಧ್ಯದಲ್ಲಿ ನನಗೆ ಆಕಾಶ ಸಿಕ್ಕಿದ. ಅರ್ಜೆಂಟಾಗಿ ಮಾತನಾಡುವುದಿದೆ ಎಂದು ಹದಿನಾಲ್ಕನೆಯ ತಿರುವಿಗೆ ಕರೆ ತಂದ. ಅದು ಇದು ಮಾತನಾಡುತ್ತಾ ತನಗೆ "AIDS" ಇದೆ ಅಂತ ಹೇಳಿ ನನಗೆ ಆಘಾತವಾಗುವಂತೆ ಮಾಡಿದ. "AIDS" ಪದ

ಕೇಳಿದೊಡನೆ ನನ್ನ ಮೈಯಲ್ಲಿನ ರಕ್ತ ಇಂಗಿಹೋಗಿ ಕಣ್ಣು ಕತ್ತಲೆ ಬಂದಂತಾಯಿತು. ಯಾರೋ ನನ್ನನ್ನು ಎರಡೂ ಕೈಗಳಿಂದ ಎತ್ತಿ ಒಗೆದಂತಾಯಿತು. ಮತ್ತೆಲ್ಲ ನಿಶ್ಶಬ್ದ. ಕೆಲವೇ ನಿಮಿಷಗಳಲ್ಲಿ ನಾನು ಹೆಣವಾಗಿದ್ದೆ. ಕಣ್ಣುಗಳು ಮಾತ್ರ ತೆರೆದುಕೊಂಡಿದ್ದವು! ಆ ತೆರೆದ ಕಣ್ಣುಗಳನ್ನು ಆತ್ಮೀಯವಾಗಿ ಸ್ಪರ್ಶಿಸಿ ಮುಚ್ಚಲು ನನ್ನವರೆನ್ನುವವರು ಯಾರೂ ಹತ್ತಿರದಲ್ಲಿರಲಿಲ್ಲ! ನಾನು ಸತ್ತರೂ ಕೊನೆ ಗಳಿಗೆಯಲ್ಲಿ ಆಕಾಶನನ್ನು ಸೆರೆಹಿಡಿದಿದ್ದ ಆ ಕಣ್ಣುಗಳಲ್ಲಿನ ಬೆಳಕು ಹಾಗೆಯೇ ಉಳಿದುಕೊಂಡಿತು! ಅವನಿಗೆ ಏಡ್ಸ್ ಆಗಿಲ್ಲದಿದ್ದರೂ ಸುಳ್ಳು ಹೇಳಿ ನನ್ನನ್ನು ಹತಾಶಳನ್ನಾಗಿ ಮಾಡಿ ಆತ್ಮಹತ್ಯೆಗೆ ಪ್ರಚೋದಿಸುವುದು ಆತನ ಗುರಿಯಾಗಿತ್ತು. ಅಂತಹ ದ್ರೋಹಿಯನ್ನು ನಾನು ಸುಮ್ಮನೆ ಬಿಡುವವಳಲ್ಲ. ಅವನನ್ನು ಕೊಂದೇ ಕಳೆಯುತ್ತೇನೆ; ತಪ್ಪಿದರೆ ಮತ್ತೊಂದು ಮದುವೆಯಾಗದಂತೆ ತಡೆಯುತ್ತೇನೆ. ಅವನನ್ನು ಇಷ್ಟರೊಳಗೆ ಮುಗಿಸಿ ಬಿಡುತ್ತಿದ್ದೆ. ಆದರೇನು ಮಾಡುವುದು? ಎರಡು ಕಾರಣಗಳಿಂದ ಅವನು ಇನ್ನೂ ಬದುಕಿ ಉಳಿದಿದ್ದಾನೆ. ಮೊದಲನೆಯದಾಗಿ ಇಷ್ಟು ದಿನ ಮತ್ತೊಂದು ಮದುವೆಯ ಪ್ರಸ್ತಾಪ ಇರಲಿಲ್ಲ. ಇವತ್ತು ಆತನ ಎಂಗೇಜ್‌ಮೆಂಟ್ ಆಗಿ ಅದಕ್ಕೆ ತೆರೆಬಿತ್ತು. ಎರಡನೆಯದಾಗಿ ಒಂದು ವೇಳೆ ಆತನನ್ನು ಹೀಗೆಯೇ ಕೊಂದರೆ ಯಾವ ಕಾರಣದಿಂದ; ಯಾರು ಕೊಂದದ್ದು ಅಂತ ಜನರಿಗೆ ಗೊತ್ತಾಗುವುದು ಬೇಡವೇ? ಒಂದು ಸಾಕ್ಷಿ ಬೇಕಲ್ಲ. ಈಗಲಾದರೆ ಚಿಂತೆಯಿಲ್ಲ. ನಿನ್ನ ಮುಖಾಂತರವಾದರೂ ವಿಷಯ ಹರಡುತ್ತದೆ. ನನ್ನ ಮನಸ್ಸಿಗೂ ನೆಮ್ಮದಿ...."

ಅಷ್ಟು ಹೇಳಿದ ರೂಪ ಬೆಳಕಾಗಿ ಪರಿವರ್ತನೆಗೊಂಡು ಕ್ರಮೇಣ ಮಾಯವಾದಳು.

ನನಗೆ ಪಕ್ಕನೆ ಎಚ್ಚರವಾಯಿತು. ಇದೆಂತಹ ವಿಚಿತ್ರ ಕನಸು ಎಂದು ಕಣ್ಣುಜ್ಜಿಕೊಳ್ಳುತ್ತಾ ಗಡಿಯಾರದತ್ತ ಕಣ್ಣು ಹಾಯಿಸಿದೆ. ಬೆಳಗಾಗಲು ಇನ್ನೂ ಕೆಲವು ಹೊತ್ತು ಬಾಕಿ ಇತ್ತು. ಹಾಸಿಗೆಯಿಂದ ಎದ್ದು ಕುಳಿತು ಕನಸನ್ನು ಮತ್ತೊಮ್ಮೆ ಮೆಲುಕಾಡಿದೆ. ನನಗೆ ಭೂತ ಪ್ರೇತಗಳಲ್ಲಿ ಒಂದಿನಿತೂ ವಿಶ್ವಾಸವಿರಲಿಲ್ಲ. ನನ್ನ ಸುಪ್ತ ಮನಸ್ಸೇ ರಾತ್ರಿ ಇಡೀ ಯೋಚಿಸಿ ಈ ರೀತಿಯ ಸ್ವಪ್ನ ಬೀಳಲು ಕಾರಣವಾಯಿತು ಎಂದು ನನ್ನ ಅಭಿಪ್ರಾಯ. ಹಾಗಿದ್ದರೂ ಆಕಾಶನ ಜೀವಕ್ಕೆ ಅಪಾಯವಿದೆ ಅಂತ ನನ್ನ ಅಂತರಾತ್ಮ ಒತ್ತಿ ಒತ್ತಿ ಹೇಳತೊಡಗಿತು. ಒಂದು ವೇಳೆ ಆಕಾಶನೇ ತಪ್ಪಿತಸ್ಥನಾದರೂ ಕಾನೂನನ್ನು ಹೊರತುಪಡಿಸಿ ಮತ್ತೊಬ್ಬರಿಗೆ ಶಿಕ್ಷಿಸುವ ಹಕ್ಕಿಲ್ಲ ಅಂತ ಯೋಚಿಸಿದವನೇ ಮತ್ತೆ ತಡಮಾಡಲಿಲ್ಲ. ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಇದು ನನ್ನ ಕರ್ತವ್ಯ ಎಂದು ಆಕಾಶನ ಮನೆಗೆ ಧಾವಿಸಿದೆ. ನಸುಕಿನ ಅಕಾಲದಲ್ಲಿ ಬಂದ ನನ್ನನ್ನು ಕಂಡು ಮನೆಯವರೆಲ್ಲಾ ಒಬ್ಬೊಬ್ಬರಾಗಿ ಹಾಸಿಗೆಯಿಂದ ಎದ್ದು ಕುಳಿತರು.

ಏನೋ ಒಂದು ಅನಾಹುತ ಸಂಭವಿಸಲಿಕ್ಕಿದೆ ಎಂದು ನನಗೆ ಸೂಚನೆ ಸಿಕ್ಕಿದ್ದರಿಂದ ಈ ರೀತಿ ಅರ್ಜೆಂಟಾಗಿ ಬರಬೇಕಾಯಿತು ಎನ್ನುತ್ತಾ ನಿನ್ನೆಯ ಫೋಟೋಗ್ರಾಫಿ, ರಾತ್ರಿ ಕಂಡ ಕನಸು, ಮುಂದೆ ಬರಬಹುದಾದ ಅನಾಹುತ ಎಲ್ಲವನ್ನೂ ಸವಿಸ್ತಾರವಾಗಿ ಹೇಳಿದೆ. ಎಲ್ಲರೂ ದಿಙ್ಮೂಢರಂತೆ ಕುಳಿತೇ ಇದ್ದರು. ಆಕಾಶ ಸಂಪೂರ್ಣ ಬೆವತು ಹೋಗಿದ್ದ. ತಾನು ತಪ್ಪಿತಸ್ಥನೆಂದು ಒಪ್ಪಿಕೊಂಡವನಂತೆ ಆತನ ಮುಖದಲ್ಲಿ ಪ್ರೇತಕಳೆ ತುಂಬಿತ್ತು. ಏನೋ ಹೇಳಬೇಕೆಂದು ಬಾಯಿ ತೆರೆದ. ಅಷ್ಟರಲ್ಲೇ ವಿದ್ಯುತ್ ಹೋಗಿ ಸುತ್ತಲೂ ಗಾಢಾಂಧಕಾರ ಆವರಿಸಿತು. ಯಾರೋ ಕತ್ತಲೆಯಲ್ಲಿ ಚಿಮಿಣಿ ಹಾಗೂ ಬೆಂಕಿ ಪೊಟ್ಟಣಕ್ಕಾಗಿ ತಡಕಾಡುವುದನ್ನು ಶಬ್ದ ಮಾತ್ರದಿಂದ ಊಹಿಸಿದ ನಾನು ಕಿಂಚಿತ್ ಬೆಳಕಿಗಾಗಿ ಹೆಗಲಿಗೇರಿಸಿದ ಕ್ಯಾಮರಾ ತೆಗೆದು ಒಂದು ಫ್ಲಾಷ್ ಹೊಡೆದೆ. ಎದುರಿನಲ್ಲಿ ತೆರೆದ ಬಾಯಿಯ ಕೆದರಿದ ಕೂದಲಿನ ರೂಪ ಎರಡೂ ಕೈಗಳನ್ನು ಮುಂದೆ ಚಾಚಿಕೊಂಡು ಯಾರದೋ ಕುತ್ತಿಗೆ ಹಿಚುಕಲು ಮುನ್ನುಗ್ಗುತ್ತಿರುವಂತೆ ನಿಂತಿರುವುದು ಕಂಡು ಬಂತು! ಬಹುಶಃ ಆಕಾಶನಿಗೂ ಆ ದೃಶ್ಯ ಕಣ್ಣಿಗೆ ಗೋಚರಿಸಿರಬೇಕು. "ಅಯ್ಯೋ ಸತ್ತೆ" ಅಂತ ಗಟ್ಟಿಯಾಗಿ ಕಿರುಚಿ ಓಡಿ ಹೋಗಲು ಪ್ರಯತ್ನಿಸಿದ ಅಂತ ಕಾಣುತ್ತೆ.....

ಪಕ್ಕನೆ ನೆಲಕ್ಕೆ ಕುಸಿದ. ಅಷ್ಟು ಹೊತ್ತಿಗೆ ವಿದ್ಯುತ್ ದೀಪ ಮತ್ತೆ ಹೊತ್ತಿಕೊಂಡಿತು. ಆಗುಂಬೆಯ ಹದಿನಾಲ್ಕನೆಯ ತಿರುವಿನಂತೆ ಆಕಾಶನ ಕೈಕಾಲು ಮುಖ ಎಂದು ದೇಹದ ಒಂದೊಂದು ಅಂಗಾಂಗವು ತಿರುಚಿಕೊಂಡಿದ್ದವು! ಬಾಯಿಯಿಂದ ಬಿಳಿ ನೊರೆ ಒಂದೇ ಸಮನೆ ಸೋರುತ್ತಿತ್ತು. ಕಣ್ಣುಗಳು ಮಾತ್ರ ತೆರೆದುಕೊಂಡೇ ಇದ್ದವು! ■

---

## ಇಲ್ಲೊಂದು ಆತ್ಮಕತೆ

ಮುಚ್ಚು ಮರೆಯಿಲ್ಲದೆ ಬಿಚ್ಚಿಟ್ಟಿದ್ದಾರೆ.

ಇವರು "ಪಟ್ಟ ಪಾಡೆಲ್ಲವು ಹುಟ್ಟಿ ಹಾಡಾದಂತೆ" ಅವರ ಜೀವನದುದ್ದಕ್ಕೂ ನಡೆದ, ಅನುಭವಿಸಿದ ಘಟನೆಗಳು ಒಂದಲ್ಲ ಎರಡಲ್ಲ, ಅವೆಲ್ಲವನ್ನು ಅನುಭವಿಸಿ ನಿಭಾಯಿಸಿ ಜೀವನಕ್ಕೆ ಒಂದು ಸೂತ್ರವನ್ನು ಕೊಟ್ಟು frame ಹಾಕಿ ವ್ಯವಸ್ಥೆಯ ವ್ಯಸ್ಥೆ ಅಂತ ಹೇಳುತ್ತವೆಯಲ್ಲ ಆ ತರಹ ಅವರು ಸಮಾಜಕ್ಕೆ ಮಾದರಿಯಾಗಿದ್ದಾರೆ.

ಕೇವಲ ತಮ್ಮ ಬಗ್ಗೆ ಅಲ್ಲ ಇಡೀ ಜನಾಂಗದ ಎಳ್ಗೆಯನ್ನು ಬಯಸುವ ಗುರುಗಳ ಮನೋಭಾವ ಆಶಾಕಿರಣ, ಅವರ ಬಗ್ಗೆ ಇರುವ ಕಳಕಳಿ ಎತ್ತಿ ತೋರಿಸುತ್ತದೆ. ಇಂತಹ ಅಮೋಘ ಕೃತಿಯನ್ನು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಹೆಗ್ಗಳಿಕೆ ಅವರದಾಗಿದೆ. ಆ ಮೂಲಕ ಇಂತಹ ಗುರುಗಳು ನಮ್ಮವರು ಎನ್ನುವ ಅಭಿಮಾನ ಹೆಮ್ಮೆ ನಮ್ಮದಾಗಿದೆ.

ಅವರ ಈ ಅಮೂಲ್ಯ ಕೃತಿಗೆ ನಾಡಿನ ಬೇರೆ ಬೇರೆ ಮೂಲೆಯಿಂದ ಅನೇಕ ಪ್ರಶಸ್ತಿಗಳು ಸಿಕ್ಕಿವೆ. ಕರ್ನಾಟಕ ವಿ.ವಿ.ದ. ಪ್ರೊ ಸ. ನ. ಮಾಳವಾಡ ಪ್ರಶಸ್ತಿ, ಕ.ಸಾ.ಪ.ದ ನಿಡಸಾತಿ ಪುಟ್ಟಸ್ವಾಮಯ್ಯ ದತ್ತಿ ನಿಧಿ ಪ್ರಶಸ್ತಿ, ನರೇಗಲ್‌ನ ಬಾಲಕೃಷ್ಣ ಸಾಹಿತ್ಯ ಪುರಸ್ಕಾರ, ಕಲಬುರ್ಗಿಯ ಕನ್ನಡ ನಾಡು ಲೇಖಕರ ಮತು ಓದುಗರ ಒಕ್ಕೂಟ ನಿಯಮಿತ ಸಾಹಿತ್ಯ ಪ್ರಶಸ್ತಿ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಮುಂತಾದವು. ●


### FORM NO IV

### STATEMENT ABOUT OWNERSHIP AND OTHER PARTICULARS OF NESARU TINGALOLE

1. Place of Publication : Mumbai
2. Perdiodicity of Publication : Monthly
3. Printer's Name : Aarati Art Printers
   Citizenship : Indian
   Address : 101, Varma Chambers, 11, Homji Street, Fort, Mumbai-400 001.
4. Publisher's Name : Dr. Jyothi Satish
   Citizenship : Indian
   Address : C/o. The Mysore Association, 393, Bhaudaji Road, Matunga, Mumbai-400 019.
5. Editor's Name : Dr. Jyothi Satish
   Citizenship : Indian
   Address : C/o. The Mysore Association, 393, Bhaudaji Road, Matunga, Mumbai-400 019.
6. Name & Address of the Owner of Newspaper : The Mysore Association, 393, Bhaudaji Road, Matunga, Mumbai-400 019.

I, Dr. Jyothi Satish, hereby declare that the particulars given above are true to best of my knowledge and belief.

# ಓದುಗರನ್ನು ಭಾವಲೋಕಕ್ಕೆ ಕೊಂಡೊಯ್ಯುವ ಗಿರಿಯಗಾನ

ಮುಂಬಯಿ ಯೂನಿವರ್ಸಿಟಿಯ ಕನ್ನಡ ವಿಭಾಗದ ಮುಖ್ಯಸ್ಥರೂ, ಸ್ಫೂರ್ತಿಯ ಚಿಲುಮೆಯೂ ಆಗಿರುವ ಉತ್ಸಾಹಿ ತರುಣ ಸನ್ಮಿತ್ರ ಡಾ. ಜಿ.ಎನ್. ಉಪಾಧ್ಯರ ಸಮರ್ಥ ಸಂಪಾದಕತ್ವದಲ್ಲಿ ಅಚ್ಚುಕಟ್ಟಾಗಿ ಮೂಡಿಬಂದಿರುವ ಹಾಡುವ ಕವಿ ಶ್ರೀ ಬಿ.ಎಸ್. ಕುರ್ಕಾಲರ ಆಯ್ದ ಕವನಗಳ ಸಂಕಲನವೇ "ಗಿರಿಯಗಾನ". ಈ ಸಂಕಲನದಲ್ಲಿ ಕುರ್ಕಾಲರ ಪ್ರಕಟಿತ ಕವನ ಸಂಕಲನಗಳಾದ "ನನ್ನ ನಿನ್ನ ಅಂತರಂಗ" (1984), "ಶ್ರಾವಣ ಲಹರಿ" (1992), "ರಾಗರಶ್ಮಿ" (2005) ಹಾಗೂ "ಬರೆಯುವೆನು ನಿನಗಾಗಿ" (2011) ದಿಂದ ಆರಿಸಿದ ಸುಂದರ ಕವನಗಳಿವೆ. ಕುರ್ಕಾಲರು ಈ ಹಿಂದೆಯೇ ನಡೆಸಿಕೊಂಡು ಬಂದಿರುವ ಸತ್‌ಸಂಪ್ರದಾಯದಂತೆ ಅವರ ಕೃತಿಗಳಲ್ಲಿ ಹುಡುಕಿದರೂ ಒಂದು ಅಕ್ಷರದೋಷ ಕಾಣಿಸದು. ಅಲ್ಲದೆ, ಕೃತಿಗಳಿಗೆ ಒಪ್ಪುವಂತಹ ಮುಖಪುಟಗಳು. 2005ರಲ್ಲಿ ಪ್ರಕಟಿತ "ರಾಗರಶ್ಮಿ" ಕವನ ಸಂಕಲನದ ಮುಖಪುಟವನ್ನು ಮತ್ತೆ ಈ ಹೊಸಕೃತಿಗೆ ಇಟ್ಟಿರುವರಾದರೂ ಆ ಶೀರ್ಷಿಕೆ ಈ ಕೃತಿಗೂ ಚೆನ್ನಾಗಿ ಒಪ್ಪಿಕೊಳ್ಳುತ್ತದೆ. ಈ ಸುಂದರ ಕೃತಿಗಾಗಿ ಕೃತಿಕಾರ, ಹಿರಿಯರಾದ ಕುರ್ಕಾಲರನ್ನು, ಸಂಪಾದಕರಾಗಿರುವ ಡಾ. ಜಿ.ಎನ್. ಉಪಾಧ್ಯರನ್ನು ಹಾಗೂ ಪ್ರಕಾಶಕರಾಗಿರುವ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗವನ್ನೂ ಹಾರ್ದಿಕವಾಗಿ ಅಭಿನಂದಿಸುತ್ತಿದ್ದೇನೆ.

1984ರಲ್ಲಿ ಪ್ರಕಟಿತ "ನನ್ನ ನಿನ್ನ ಅಂತರಂಗ" ಹಾಗೂ 1992 ರಲ್ಲಿ ಪ್ರಕಟಿತ "ಶ್ರಾವಣ ಲಹರಿ"ಯನ್ನು ನಾನು ಓದಿರದಿದ್ದರೂ 2005 ರಲ್ಲಿ ಪ್ರಕಟಿತ "ರಾಗರಶ್ಮಿ" ಹಾಗೂ 2011ರಲ್ಲಿ ಬೆಳಕು ಕಂಡಿರುವ "ಬರೆಯುವೆನು ನಿನಗಾಗಿ" ಕವನ ಸಂಕಲನಗಳನ್ನು ಓದಿ ಆನಂದ ಪಟ್ಟಿದ್ದೆ. ಈಗ ಈ ಆಯ್ದ ಕವನಗಳ ಸಂಕಲನ ಕೃತಿ ಪ್ರಕಟಗೊಂಡುದರಿಂದ ಅವರ ನಾಲ್ಕೂ ಸಂಕಲನಗಳ ಕವನಗಳನ್ನು ಒಟ್ಟಾಗಿ ಓದುವ, ಅನುಭವಿಸುವ ಯೋಗ ನನ್ನ ಪಾಲಿಗೊದಗಿ ಕುರ್ಕಾಲರ ಮತ್ತು ನನ್ನ ಪರಿಚಯ ಮತ್ತು ಸ್ನೇಹಕ್ಕೆ ಎರಡು ದಶಕಗಳೆ ಕಳೆದಿವೆ. ಅವರ ಅಧ್ಯಕ್ಷತೆಯಲ್ಲಿ ನಡೆದಿರುವ, ಅಲ್ಲದೆ ಅವರು ಪಾಲ್ಗೊಂಡ ಬಹಳಷ್ಟು ಕವಿಗೋಷ್ಠಿಗಳಲ್ಲಿ ಪ್ರತಿಯೊಂದು ಸಭೆ ಸಮಾರಂಭಕ್ಕೊಂದು ವಿಶಿಷ್ಟ ಕಳೆಯಿರುತ್ತದೆ.

ಅವರ ಕವನಗಳಲ್ಲಿ ರಚನಾ ಕೌಶಲ್ಯವಿದೆ, ಪದಲಾಲಿತ್ಯವಿದೆ, ಸಹಜವಾದ ಕವಿಚೇತನದ ಚಿಲುಮೆಯಿದೆ. ಅವರ ಕವಿತೆಯಲ್ಲಿರುವ ನಿಸರ್ಗ ಪ್ರೀತಿ, ಜಾನಪದ ಸತ್ಯ, ಜೀವನೋತ್ಸಾಹ, ಸಮಾಜದ ಕುರಿತು ಅವರ ಪ್ರೀತಿ ಓದುಗರನ್ನು ತನ್ನತ್ತ ಸೆಳೆಯುತ್ತವೆ. ಲಾಲಿತ್ಯ, ಗೇಯತೆಯಿಂದ ಕೂಡಿದ ಅವರ ಕವಿತೆಗಳನ್ನು ನಾನು ನನ್ನ ಹೈಸ್ಕೂಲ್ ಜೀವನದಲ್ಲಿಯೇ (1970) ಹಾಡಿದ್ದೆ, ಆಲಿಸಿದ್ದೆ. ಆದರೆ, ಅದು ಕುರ್ಕಾಲರ ಕವನವೆಂದು ಮುಂಬೈ ಬಂದ ನಂತರವೇ ತಿಳಿದದ್ದು. ಕವನ - 'ಕಾಮಿನಿಯ ಕನಸು' (ನನ್ನ ನಿನ್ನ ಅಂತರಂಗ 1984)

'ನನ್ನ ನಿನ್ನ ಅಂತರಂಗ' ಕವನ ಸಂಕಲನದ 26 ಕವನಗಳನ್ನು ಇಲ್ಲಿ ಆಯ್ದುಕೊಳ್ಳಲಾಗಿದೆ. 'ಮುನ್ನಡೆಸು ದೇವಾ' ಹತ್ತು ಸಾಲಿನ ಚಿಕ್ಕ ಕವನವಾದರೂ ಚೊಕ್ಕವಾಗಿ, ರಾಗಬದ್ಧವಾಗಿ, ಲಯಬದ್ಧವಾಗಿ ಹಾಡುವ ಕವನ. ಕವನದ ಮೊದಲ ಎರಡು ಸಾಲುಗಳು ಪೂರ್ತಿ ಕವನದ ಸೌಂದರ್ಯವನ್ನು, ಭಾವವನ್ನು ನಮ್ಮೆದುರು ಬಿಚ್ಚಿಡುತ್ತವೆ.

"ಸುವಿಚಾರಗಳ ಧಾರೆ ಹರಿಯಲೆಮ್ಮೆಡೆಗೆ
ನವಭಾವ ನವಸ್ಫೂರ್ತಿ ನವ ಚೇತನವ ಬೆಳಗೆ"

ದಕ್ಷಿಣ ಕನ್ನಡದಲ್ಲಿ ಹುಟ್ಟಿ ಬೆಳೆದ ನಾವು ಮೂಲತಃವಾಗಿ ಕೃಷಿಕರು. ಇದೇ ಸಂಕಲನದಲ್ಲಿ ಬರುವ 'ಹುಚ್ಚು ಹಿಡಿಸಿದೆ' ಕವನದಲ್ಲಿ ರೈತರು ಬೆವರು ಸುರಿಸಿ ದುಡಿದ ಹೊಲಗಳಲ್ಲಿ ಬೆಳೆದು ನಿಂತ, ಬೆಳಗಿನಿಂತ ಫಸಲನ್ನು ಕಂಡು ಸಂತಸದಿಂದ ಕರೆ ನೀಡುವ ಕವನ. ಓದಿಸಿಕೊಂಡು ಹೋಗುತ್ತದೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡಲು ಶ್ರಮಿಸಿದ ಸಿಡಲ ಮರಿಗಳ ಕುರಿತಾದ ಕವನ 'ವನಸುಮಗಳಿವರು' ಓದುತ್ತಾ ಹೋದಂತೆ ಮೈ ರೋಮಾಂಚನವಾಗುತ್ತದೆ.

ವರಕವಿ ಬೇಂದ್ರೆಯವರ ಸಿದ್ಧಿ ಸಾಧನೆಗೆ ಬೆಳಕುತೋರುವ ಕವನ 'ನಮ್ ಬೇಂದ್ರೆ ಸಂದಿಲ್ಲ' ಓದಿಸಿಕೊಂಡು ಹೋಗುತ್ತದೆ. ಬೇಂದ್ರೆಯವರನ್ನು ಮತ್ತೆ ನಮ್ಮೆದುರು ತಂದು ನಿಲ್ಲಿಸುತ್ತದೆ. ನುಗ್ಗೋಣ ಮುಂದೆ, ಹೊಸ ಹಾಡು ಹಾಡಬೇಕು, ಬರುತಾರ ದೇಶ ಪ್ರೇಮದ ಕುರಿತಾದ ಕವನಗಳೂ ಜಯ ಪ್ರಕಾಶ್ ನಾರಾಯಣರ ಸಾಧನೆಗೆ ಬೆಳಕು ತೋರುವ ಕವನ 'ಸುದ್ದಿ ಸುಳ್ಳಾಗಲಿಲ್ಲ'.

'ಶ್ರಾವಣ ಲಹರಿ' (1992) ಕವನ ಸಂಕಲನದಿಂದ ಆಯ್ದ ಸುಂದರ ಕವನಗಳು. "ಗಿರಿಯ ಗಾನ" ಕೃತಿಯಲ್ಲಿದೆ. 'ಭಿಕ್ಷೆ' ದೇವರು ದಯಪಾಲಿಸುವ ಬದುಕಿಗೆ ನಾವು ಬದ್ಧರಾಗಿರಬೇಕೆಂದರೆ 'ಯಾರಿವಳು ಈ ಹುಡುಗಿ' ಕವಿಗೆ ಸ್ಫೂರ್ತಿ ನೀಡುವ ಕಾವ್ಯ ಕನ್ನಿಕೆಯ ಕುರಿತಾಗಿ ಹೆಣೆದಿರುವ ಕವನ.

'ಭರವಸೆಯ ದೀವಳಿಗೆ' ದೀಪಾವಳಿ ಸಂಭ್ರಮವನ್ನು ತೆರೆದಿಡುವ ಕವನ. ಈ ಕವಿತಾ ಸಂಕಲನದ ಶೀರ್ಷಿಕೆ 'ಶ್ರಾವಣ ಲಹರಿ'. ಇದೇ ಹೆಸರಿನ ಸುಂದರ ಕವನವೂ ಇಲ್ಲಿದೆ. ಕವನದ ಕೆಲವು ಸಾಲುಗಳಲ್ಲಿ ಬರುವ ಭಾವನೆಗಳನ್ನು ಓದಿ ನೋಡಿ...

"ಕಾಡಿಗೆ ರಂಗಿನ ಕೋಗಿಲೆ ಹಾಡೆಲೆ
ಹಾಡೇ ನಿನ್ನುಸಿರು
ಕಾಡಿಗೂ ನಾಡಿಗೂ ಸಂಭ್ರಮವಾಗಿದೆ
ಹಾಡಾಗಿದೆ ಹಸಿರು"

1990ರಲ್ಲಿ ಕುರ್ಕಾಲರು ನಿವೃತ್ತಿಹೊಂದುವಾಗ ಬರೆದಿರುವ ಕವನ 'ವಿದಾಯ' ಮನವನ್ನು ತಟ್ಟುತ್ತದೆ. ಪ್ರೀತಿಯೆ ತಮ್ಮ ಬಾಳ ಪುಟದಿಂದ ದೂರ ಸರಿದಾಗ ಹೆಣೆದಿರುವ ಕವನ ನೀ ತೊರೆದು ಹೋದಾಗ 'ನೆಂಟ ಬಂದಿಹ ನಮ್ಮ' ಮೊಮ್ಮಗ ಬಂದ ಸಂಭ್ರಮವನ್ನು ತೆರೆದಿಟ್ಟರೆ, ಪಾಜಕ ಕ್ಷೇತ್ರದಲ್ಲಿಯೂ ಬಂಡೆಯನ್ನು ಒಡೆಯುವ ದುರುಳರನ್ನು ಕಂಡು ವಿಷಾದ ವ್ಯಕ್ತಪಡಿಸುವ ಕವನ 'ಒಂದು ಬಂಡೆಯ ಕತೆ'. ಅದೇ ನಿಟ್ಟಿನಲ್ಲಿ ಸಾಗುವ ಮತ್ತೊಂದು ಕವನ 'ನನ್ನ ನಿನ್ನ ಅಂತರಂಗ' ಸಂಕಲನದ ಹಾದಿಗೆ ಬರುತ್ತೇನೆ.

'ರಾಗರಶ್ಮಿ' (2005) ಕವನ ಸಂಕಲನದಿಂದ ಆಯ್ದ 28 ಸುಂದರ ಲಾಲಿತ್ಯಪೂರ್ಣ ಕವನಗಳು ಈ ಆಯ್ದ ಕವನಸಂಕಲನದಲ್ಲಿ ಬಂದಿದ್ದು, ಕುರ್ಕಾಲರ ಪ್ರತಿಭೆಗೆ ಸಾಕ್ಷಿ ಹೇಳುತ್ತವೆ. ಭಾರತಾಂಬೆಯನ್ನು 'ಕುರಿತಾದ' ಧನ್ಯರಾಗುವೆವು. ಅದೇ ರೀತಿ ಕವನ ಸಂಕಲನದ ಶೀರ್ಷಿಕೆಗೆ ಕೊಟ್ಟಿರುವ 'ರಾಗರಶ್ಮಿ' ಹೆಸರಿನ ಕವನವೂ ಇಲ್ಲಿ ಸೊಗಸಾಗಿ ಮೂಡಿಬಂದಿದೆ. ಕವನದ ಕೆಲವು ಸಾಲುಗಳನ್ನು ಓದಿದರೆ ಪೂರ್ಣ ಕವನದ ಮೋಹಕತೆಯನ್ನು ತೆರೆದಿಡುತ್ತದೆ.

"ಕರುಳ ಮಿಡಿಯುವ ದಿವ್ಯನಾದವು
ಮೋಡಿ ಮಾಡುತ ಮೊಳಗಿದೆ
ರಾಗರಶ್ಮಿಯ ರಂಗಿನಾಟಕೆ
ಕಾಡು ತನ್ಮಯವಾಗಿದೆ"

ಪ್ರಕೃತಿಯ ಸೌಂದರ್ಯವನ್ನು ಕಂಡು ಅರಳುವ ಕವಿ ಮನಸ್ಸು ಪ್ರಕೃತಿಯ ವಿರುದ್ಧ ಆಗುವ ಅನ್ಯಾಯವನ್ನು ಕಂಡು ಸಿಡಿದೇಳುತ್ತದೆ. ಅಂತಹ ಅನೇಕ

✍ ಡಾ. ಕರುಣಾಕರ್ ಎನ್. ಶೆಟ್ಟಿ ಪಣಿಯೂರ್

ಕವನದ ಈ ಆಯ್ದು 'ಗಿರಿಯ ಗಾನ' ಸಂಕಲನದಲ್ಲಿ ಬರುತ್ತದೆ.

'ಬರೆಯುವೆನು ನಿನಗಾಗಿ' (2011) ಅಲ್ಲದೆ, ಹೊಸ ಕವನಗಳೂ ಸೇರಿ ಒಟ್ಟು 31 ಕವನಗಳು ಆಯ್ದು ಕವನ ಸಂಕಲನದ ಕೊನೆಯಲ್ಲಿ ಬಂದು ಕವಿ ಕುರ್ಕಾಲರು 1984 ರಿಂದ 2011ರ ವರೆಗೆ ಕವಿಯಾಗಿ ನಡೆದುಬಂದ ದಾರಿಗೆ ಈ "ಗಿರಿಯಗಾನ" ಸಾಕ್ಷಿಯಾಗಿ ನಿಲ್ಲುತ್ತದೆ. ಮೊದಲಿನಿಂದಲೂ ಕುರ್ಕಾಲರು ಮೌಲಿಕವಾದ ಕವನಗಳನ್ನು ಕಟ್ಟುತ್ತಾ ಬಂದಿದ್ದಾರೆ ಎನ್ನುವುದು ಇಲ್ಲಿ ಪ್ರಸ್ತುತವೆನಿಸುತ್ತದೆ. ತನ್ನ ಸುತ್ತಮುತ್ತಲಿನ ಘಟನೆಗಳು ಅವರ ಕವನಗಳಲ್ಲಿ ಅಕ್ಷರ ರೂಪವನ್ನು ಪಡೆದು ಕಾಲಕ್ಕೆ ಸಾಕ್ಷಿಯೆನಿಸುತ್ತವೆ. ಪ್ರಕೃತಿಯನ್ನು ವರ್ಣಿಸುವ ಕವನದ ಜೊತೆ ಜೊತೆಗೆ ತನ್ನ ಭಾವನೆಗಳಿಗೆ, ತವಕ ತಲ್ಲಣಗಳಿಗೆ ನೋವು ನಲಿವಿಗೆ ವಿಷಾದ ಎಲ್ಲವೂ ಅವರ ಕವನಗಳಲ್ಲಿ ಅಕ್ಷರ ರೂಪವನ್ನು ಪಡೆದಿವೆ. ರಾಜಕೀಯ ಡೊಂಬರಾಟಗಳೇ ಅನೈತಿಕತೆ ಕಂಡು ಬಂದಲೆಲ್ಲ ಕುರ್ಕಾಲರು ವಿರೋಧಿಸುತ್ತಾ ಬಂದವರು.

'ಶುಭವಾಗಲಿ' ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಧರ್ಮದರ್ಶಿ ಪನರೂರು ಹರಿಕೃಷ್ಣರ ಬದುಕಿನ ಸಿದ್ದಿ ಸಾಧನೆಗೆ ಬೆಳಕು ತೂರಿದರೆ, 'ಬರೆಯುವೆನು ನಿನಗಾಗಿ' ಶೀರ್ಷಿಕೆಯ ಕವನ ತನ್ನಲ್ಲಿ ಶಕ್ತಿ ಸಾಮರ್ಥ್ಯ ಇರುವವರೆಗೆ ತಾನು ಬರೆಯುತ್ತಲೇ ಇರುವೆನೆಂಬ ಭಾಷೆಯನ್ನಿಲ್ಲಿ ಕವಿ ಸಹೃದಯರಿಗೆ ನೀಡುತ್ತಾರೆ.

"ಇಂದು ಇಷ್ಟೇ ಸಾಕು
ನಾಳೆಯನು ಕಾಯುವೆನು
ದಿನಕ್ಕೊಂದು ಹಾಡನ್ನು ಬರೆದು ಮುಗಿಸುವೆನು
ಕಣ್ಣು ಮಂಜಾದರೂ
ಕೈ ಕಾಲು ನಡುಗಿದರೂ
ಶಾಯಿ ಮುಗಿಯುವ ತನಕ ಮುಂದುವರಿಸುವೆ"

ತುಂಬೆ ಗಿಡದ ಬಗ್ಗೆ 'ಧರೆಗಿಳಿದ ರಂಭೆ' ಕವನ ನುಡಿದರೆ, 'ಪರಮೆಗಳಿಗೆ' ಪಾರಿಜಾತ ಹೂಗಿಡಕ್ಕೆ ಮುತ್ತಿಗೆ ಹಾಕುವ ಅಸಂಖ್ಯಾತ ಪಾತರಗಿತ್ತಿಗಳ ಸುಂದರ ಚಿತ್ರಣ ನೀಡುತ್ತವೆ. 'ಬಂಗಾರದ ತೇರು' ಲಾವಣಿ ಗೀತೆಯಾದರೆ, 'ಬೇಕಾಗಿದೆ' ಹಾಸ್ಯ ಕವನ. ಡಾ. ಸುನೀತಾ ಶೆಟ್ಟಿ, ಮಹಾಬಲ ಶೆಟ್ಟಿಯವರ ದಾಂಪತ್ಯದ ಚಿನ್ನದ ಹಬ್ಬದ ಸಂಭ್ರಮ 'ಬಂಗಾರದ ತೇರು' ಕವನದಲ್ಲಿ ಮೂಡಿಬಂದಿದ್ದರೆ, "ಜಯ ಕನ್ನಡವೆನ್ನಿ" ಕನ್ನಡ ನಾಡಿನ ವೈಭವಕ್ಕೆ ಮೀಸಲಾದ ಕವನ. 'ಕನ್ನಡದ ಕುಲಪುತ್ರ' ಕವನದಲ್ಲಿ ತಾನು ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದ ಹೆಮ್ಮೆಯನ್ನು ಕುರ್ಕಾಲರು ವರ್ಣಿಸಿದ್ದಾರೆ. 'ನಮ್ಮೊಳಗೆ' ಕವಿ ಕುರ್ಕಾಲರಿಗೆ ಎಪ್ಪತ್ತನಾಲ್ಕು ತುಂಬಿದ ಸಂಭ್ರಮದಲ್ಲಿ ಬರೆದಿರುವ ಕವನ. ಅವರ ಮನದ ಆಶಯವಿಲ್ಲ ಮೂಡಿಬಂದಿದೆ.

"ಸಾಕಷ್ಟು ದಿನವಿಲ್ಲ
ಸ್ವಾವಲಂಭನೆಯಿಂದ
ಇರಬೇಕು ಎಂಬಾಸೆ ನನ್ನ ಶಕ್ತಿ
ಕೊನೆಯ ಉಸಿರಿನ ತನಕ
ಕೈಲಾದ ಸೇವೆಯನು
ಮೂಡಿ ಮಂಗಳ ಹಾಡಿ ಪಡೆವ ಮುಕ್ತಿ".


'ಹಂಸಗೀತೆ' ಡಾ. ವಸಂತ ಕುಮಾರ ತಾಳ್ತಜೆ ಅವರ ಧರ್ಮಪತ್ನಿ ಮಣಿಮಾಲಿನಿ ಅವರ ಸ್ಮೃತಿಗಾಗಿ ಬರೆದಿರುವ ಗೀತೆ.

'ಸಾವಿರ ಸಲಾಂ' ನಮ್ಮ ಮಾಜಿ ರಾಷ್ಟ್ರಪತಿ ದಿ. ಅಬ್ದುಲ್ ಕಲಾಂರ ಸಾಧನೆಯನ್ನು ಎತ್ತಿ ತೋರಿಸುವ ಕವನ ಅಲ್ಲದೆ, ಈ ಕೃತಿಯನ್ನೂ ಅವರ ನೆನಪಿಗೆ ಅರ್ಪಿಸಲಾಗಿದೆ.

'ಶುಭ ಚಿಂತನೆ' ಡಾ. ಜಿ.ಡಿ. ಜೋಶಿ ಅವರ ದಾಂಪತ್ಯದ ಚಿನ್ನದ ಹಬ್ಬದ ಸಂದರ್ಭದಲ್ಲಿ ಮೂಡಿಬಂದಿದ್ದರೆ ಕೊಳಲು ಕಳೆದ್ಹೊಯ್ತು ಶ್ರೀಕೃಷ್ಣನ ಕುರಿತಾದ ಕವನವಾದರೆ, 'ನಾನೆ ನಿನ್ನ ರಾಧೆಯು' ಅದೇ ನಿಟ್ಟಿನಲ್ಲಿ ಸಾಗುವ ಕವನ. ಅಕ್ಷಯ ಮಾಸಿಕಕ್ಕೆ ಶುಭಕೋರುವ ಕವನ "ನಮೋ ನಮ್ಮ ಅಕ್ಷಯಕೆ". ಕೇಳೆಯೇರಿದ ಶುಭರಾತ್ರಿ 'ತೀರದ ಸೆಳೆತ' ಕೃಷ್ಣನನ್ನು ನೆನೆದಷ್ಟೂ ಕವಿ ಕುರ್ಕಾಲರು ದಣಿವುವುದನ್ನು ನಮಗೆ ತಿಳಿಸುವ ಕವನಗಳು 'ಜೇಡರ ಬಲೆಗೆ' ಹೆಸರಿನಲ್ಲಿ ಮಲಾಲ ಕುರಿತಾದ ಕವನವೂ ಈ ವಿಭಾಗದಲ್ಲಿ ಬಂದು ಕೃತಿಯ ಮೌಲ್ಯ ಹೆಚ್ಚಿಸಿದೆ.

ಹೀಗೆ ಈ ಗಿರಿಯ ಗಾನದಲ್ಲಿ ಕುರ್ಕಾಲರ ಒಟ್ಟು 113 ಸುಂದರ ಕವನಗಳು ಒಟ್ಟಾಗಿ ಅಂದವಾಗಿ ಒಂದು ಸಂಗ್ರಹಯೋಗ್ಯವೆನಿಸಿದೆ. ಡಾ. ಜಿ.ಎಂ. ಹೆಗಡೆ ಇವರ ಪ್ರಸ್ತಾವನೆ ಡಾ. ಜಿ.ಎನ್. ಉಪಾಧ್ಯರ ಸಂಪಾದಕೀಯ ಕೃತಿಯ ತೂಕಕ್ಕೆ ಪೂರಕವಾಗಿ ಮೂಡಿಬಂದಿದೆ. ಕೃತಿಕಾರರಿಗೆ ಕಾರಣಕರ್ತರಿಗೆ ಮತ್ತೊಮ್ಮೆ ಮಗದೊಮ್ಮೆ ಅಭಿನಂದನೆಗಳು.

# OBITUARY




We regret to inform the sad demise of our senior most member Shri. Kancharti Krishnamoorthi Upadhyaya on January 20th 2016, aged 91 years. We pray almighty to give strength to the bereaved family and may his soul rest in peace

***



We regret to inform the sudden and demise of our member **Smt. Nandini Swamy** 54 years, on January 18, 2016. She is survived husband, son and daughter. We pray almighty to give strength to the bereaved family and may his soul rest in peace.

***



We regret to inform sad demise of **Mr. Arakalgud Ananthramaiah**, aged 94 years, father of our member Shri. A. Ravi. We pray almighty to give strength to the bereaved family and may his soul rest in peace.

# ಸಿನಿಮಾಸ್ಕೋಪು

ಕಳೆದವಾರ ಮನೆಯ ಹತ್ತಿರದ ಮಲ್ಟಿಪ್ಲೆಕ್ಸ್‌ನಲ್ಲಿ ಮಗನ ಒತ್ತಾಯಕ್ಕೆ ವಿ.ಐ.ಪಿ ಥಿಯೇಟರ್‌ನಲ್ಲಿ 600ರೂನ ಟಕೆಟ್ ಖರೀದಿಸಿ ಒಂದು ಒಳ್ಳೆಯ ಹಿಂದಿ ಸಿನಿಮಾ ನೋಡಿ ಬಂದೆ. ಕುಳಿತು ಕೊಳ್ಳಲು ಭರ್ಜರಿ ಸೋಫಾ, ಕಾಲು ನೀಡಿಅಥವಾ ಕಾಲು ಮಡಚಿ, ಯಾವುದೇ ಭಂಗಿಯಲ್ಲಿ ಕುಳಿತು ಸಿನಿಮಾ ನೋಡಬಹುದು. ಮಧ್ಯಇಂಟರ್‌ವಲ್‌ನಲ್ಲಿ ನೂರುರೂ (+15 ರೂಟಾಕ್ಸ್) ಕೊಟ್ಟುಎಸ್‌ಪ್ರೆಸ್ಸೋಕಾಫಿ ಹೀರಿದೆ. ಆಹಾ! ಸ್ವರ್ಗಕ್ಕೆ ಮೂರೇಗೇಣು. ಮೂರು ಗಂಟೆಗಳ ಸಿನಿಮಾ ವೀಕ್ಷಿಸಿ ಮನೆಗೆ ಬಂದಾಗ ಮನಸ್ಸು ಹಿಂದೆ ಬಹು ಹಿಂದೆ ನೋಡಿದ ಸಿನಮಾಗಳ ನೆನಪುಗಳು ಮನದ ಪರದೆಯ ಮೇಲೆ ಹರಿದಾಡಿತು. ಆಗ ಬಹುಷಃ ನನಗೆ ಮೂರೋ ನಾಲ್ಕೋ ವರ್ಷ. ನಮ್ಮ ಮನೆಯ ಪಕ್ಕದ ಮಾಳದಲ್ಲೇ ಸಿನಿಮಾಟೆಂಟ್. ರಾತ್ರಿಯ ಹೊತ್ತು ಸಿನಿಮಾದ ಹಾಡು ಸಂಭಾಷಣೆಗಳೆಲ್ಲಾ ಜೋರಾಗಿ ಕೇಳುತ್ತಿತ್ತು. ನಾನು ನನ್ನಅಪ್ಪಅಮ್ಮನಜೊತೆ ಹೋಗಿ ನೋಡಿದ ಮೊದಲ ಸಿನಿಮಾ "ರತ್ನಗಿರಿರಹಸ್ಯ". ಕತೆ ಏನೂ ಅರ್ಥವಾಗಿರಲಿಲ್ಲ ಆದರೆ "ಅಮರಾ ಮಧುರಾ ಪ್ರೇಮ" ಹಾಡು ಮಾತ್ರ ಬಹಳ ದಿನಗಳವರೆಗೆ ಎಲ್ಲರ ಬಾಯಲ್ಲೂ ನಲಿದಾಡುತ್ತಿತ್ತು. ನಂತರ ಕಾರಣಾಂತರಗಳಿಂದ ದಕ್ಷಿಣಕನ್ನಡದ ನಮ್ಮಊರಿಗೆ ಹೋಗಿದ್ದರಿಂದ, ಅದುತೀರಾ ಸಣ್ಣ ಹಳ್ಳಿಯಾದ್ದರಿಂದ ಸಿನಿಮಾ ನೋಡಿದ ನೆನಪೇ ಇಲ್ಲ. ಮುಂದೆ ಶಾಲಾದಿನದಲ್ಲಿ ಹುಣಸೂರಿಗೆ ಬಂದು ನೆಲೆಸಿದ ಮೇಲೆ ಸಿನಿಮಾದಜೊತೆ ನಂಟು ಶುರುವಾಯಿತು.

ನಮ್ಮ ಹುಣಸೂರಿನಲ್ಲಿ ಆಗ ಇದ್ದದ್ದುಒಂದೇಥಿಯೇಟರ್. ಅದರ ಹೆಸರು ಶಿವಾಜಿ ಥಿಯೇಟರ್. ನಮ್ಮಥಿಯೇಟರ್‌ನಲ್ಲಿ ಬಾಲ್ಕನಿ ಇರಲಿಲ್ಲ. ಗಂಡಸರಿಗೆ ಮತ್ತು ಹೆಂಗಸರಿಗೆ ಕುಳಿತು ಕೊಳ್ಳಲು ಬೇರೆ ಬೇರೆಜಾಗ. ಗಂಡಸರು ಮತ್ತು ಹೆಂಗಸರ ಆಸೀನದ ನಡುವೆಒಂದು ಪ್ಲೈವುಡ್‌ನ ಪರದೆ. ಗಂಡಸರಿಗೆಥಿಯೇಟರ್‌ನೆ ಬಲಭಾಗದಿಂದಎಂಟ್ರಿಯಾದರೆ ಹೆಂಗಸರಿಗೆಎಡಭಾಗದಿಂದ. ಹೆಂಗಸರ ಭಾಗದಲ್ಲಿಟಿಕೆಟ್ಟಿನ ಬೆಲೆ 50 ಪೈಸೆ ಮತ್ತು ನಲವತ್ತು ಪೈಸೆ. ಐವತ್ತು ಪೈಸೆಗೆ ಒರಗಿಕೊಳ್ಳುವ ಬೆಂಚು, ನಲವತ್ತು ಪೈಸೆಗೆ ಬರೀ ಬೆಂಚು. ನಮ್ಮತಂದೆಯಜೊತೆಗೆ ಸಿನಿಮಾಕ್ಕೆ ಹೋದರೆಗಂಡಸರು ಕುಳಿತಲ್ಲಿ ಅವರಜೊತೆಗೆಕಬ್ಬಿಣದಕುರ್ಚಿಯಲ್ಲಿ ಕುಳಿತುಕೊಳ್ಳುವ ಸದವಕಾಶ. ಅದಕ್ಕೆಒಂದುರುಪಾಯಿಟಿಕೆಟ್. ಸಿನಿಮಾದಇಂಟರ್‌ವಲ್‌ನಲ್ಲಿ ಹತ್ತು ಪೈಸೆಯಕಡಲೆಕಾಯಿ ಪೊಟ್ಟಣ. ನಮ್ಮೂರಿನಲ್ಲಿ ಬರುತ್ತಿದ್ದದ್ದು ಹೆಚ್ಚಾಗಿ ತಮಿಳು ಸಿನಿಮಾಗಳು. ಪಾಲುಂ ಪಳಮುಂ, ಪಣಮಾ ಪಾಶಮಾ, ವೀರ ಪಾಂಡ್ಯಕಟ್ಟಬೊಮ್ಮನ್ ಮುಂತಾದ ಸಿನಿಮಾಗಳನ್ನು ನೋಡಿಯೇಅಲ್ಪ ಸ್ವಲ್ಪ ತಮಿಳನ್ನು ಕಲಿತದ್ದು. ಆಗ ಅಪರೂಪಕ್ಕೊಮ್ಮೆ ರಾಜಕುಮಾರ್‌ನಕನ್ನಡ ಸಿನಿಮಾ ಬಂದರೆಅದು ತಿಂಗಳುಗಟ್ಟಳೆ ನಡೆಯುತ್ತಿತ್ತು. ಸುತ್ತಮುತ್ತಿನ ಹಳ್ಳಿಯವರೆಲ್ಲಾ ಗಾಡಿಕಟ್ಟಿಕೊಂಡು ಬಂದು ಸಿನಿಮಾ ನೋಡಿ ಆನಂದಿಸುತ್ತಿದ್ದರು. ಪ್ರತಿದಿನ ಬೆಳಿಗ್ಗೆ ಹತ್ತು ಹನ್ನೊಂದುಗಂಟೆಯ ಹೊತ್ತಿಗೆಎಲ್ಲರಿಗೂ ಸಿನಿಮಾಗಾಡಿ ಬರುವ ನಿರೀಕ್ಷೆ. ಒಂದುಗಾಡಿಯಎರಡೂ ಬದಿಯತಟ್ಟಿಯ ಮೇಲೆ ಸಿನಿಮಾ ಪೋಸ್ಟರ್, ಗಾಡಿ ಹೊಡೆಯುವ ಹುಡುಗಕೈಯಲ್ಲಿ ಮೈಕ್ ಹಿಡಿದು "ಬನ್ನಿ, ನೋಡಿ ಆನಂದಿಸಿ ಎಂದು ಸಿನಿಮಾದ ಹೆಸರನ್ನುಅರಚುತ್ತಿದ್ದ. ಸಿನಿಮಾದಕೊನೆಯ ದಿನವಾದರೆ "ಇಂದೇಕೊನೆಯ ದಿನ ಎಲ್ಲರೂ ಬನ್ನಿ" ಎಂದುಆಹ್ವಾನಿಸುತ್ತಿದ್ದ. ಅಂದಿನ ದಿನಗಳಲ್ಲಿ ಮ್ಯಾಟಿನಿ ಶೋ ಇರಲಿಲ್ಲ. ಕೇವಲ ಆರುಗಂಟೆಗೊಂದು ಶೋ ಮತ್ತು ಒಂಬತ್ತುಗಂಟೆಗೊಂದು ಶೋ. ಸ್ನೇಹಿತರಜೊತೆಗೆ ಸಿನಿಮಾಕ್ಕೆ ಹೋಗುವ ಕಟ್ಟಳೆ ಆಗಿನ್ನೂ ಶುರುವಾಗಿರಲಿಲ್ಲ. ಸಿನಿಮಾಕ್ಕೆ ಹೋಗುವುದೆಂದರೆ ಸಂಸಾರ ಸಮೇತ. ಮನೆಗೆ ನೆಂಟರು ಬಂದಾಗಅವರನ್ನುಒಂದು ದಿನ ಸಿನೆಮಾಕ್ಕೆ ಕರೆದುಕೊಂಡು ಹೋಗುವುದುಅತಿಥಿ ಸತ್ಕಾರದಒಂದು ಭಾಗವಾಗಿತ್ತು. ಕನ್ನಡ ಸಿನಿಮಾಕ್ಕೆ ಹೋದರೆ ಆ ಸಿನಿಮಾದ ಹಾಡಿನ ಪುಸ್ತಕಗಳು ನಾಲ್ಕಾಣೆಗೆ ಸಿಗುತ್ತಿತ್ತು. ಇಂಟರ್‌ವಲ್‌ನಲ್ಲಿ ಪುಸ್ತಕ ಮಾರಾಟಕ್ಕೆ ಬರುತ್ತಿದ್ದಂತೆಯೇ ಬಿಸಿದೋಸೆಯಂತೆ ಖರ್ಚಾಗುತ್ತಿತ್ತು. ನಂತರ ಮನೆಯಲ್ಲಿ ಹಾಡು ಬಾಯಿಪಾಠ ಆಗುವವರೆಗೆರೇಡಿಯೋದಲ್ಲಿ ಆ ಹಾಡು ಬಂದಾಗ ಕೇಳಿ ಕಲಿಯುವ ಹುಚ್ಚು.

ಅಂದಿನ ಸಿನಿಮಾಗಳ ಮತ್ತೊಂದು ವೈಶಿಷ್ಟ್ಯವೆಂದರೆ ಸಿನಿಮಾಗೃಹದಿಂದ ಅಳದೆ ವಾಪಾಸಾಗುವ ಹೆಂಗಸರೇಇಲ್ಲಎನ್ನಬೇಕು. ಕೆಟ್ಟಅತ್ತೆ ಮತ್ತು ಪಾಪದ ಸೊಸೆ ಅಥವಾ ಗಯ್ಯಾಳಿ ಸೊಸೆಯಂದಿರು ಮತ್ತು ಬೆಚಾರಿ ಮಾ ಅಥವಾ ಸರ್ವಗುಣ ಸಂಪನ್ನ ನಾಯಕನನ್ನು ಎಲಾ್ಲರೀತಿಯ ಹಿಂಸೆಗಳಿಗೆ ಗುರಿ ಪಡಿಸುವ ಖಳನಾಯಕ ಇಂತಹ ಕತೆಗಳಲ್ಲಿ ಸಾಮಾನ್ಯವಾಗಿ ಇಂಟರ್‌ವಲ್ ನಂತರ ಹೆಂಗಳೆಯರು ಅಳಲು ಶುರು ಮಾಡಿದರೆಕೊನೆಯಲ್ಲಿಕತೆ ಸುಖಾಂತ್ಯವಾದಾಗ ಎಲ್ಲರೂ ತಮ್ಮ ಸೀರೆಯ ಸೆರಗಿನಿಂದ ಕಣ್ಣೊರೆಸಿಕೊಂಡು ನಿಟ್ಟುಸಿರು ಬಿಡುತ್ತಿದ್ದರು. ಇನ್ನು ನಾವು ಮಕ್ಕಳು ಟೆನ್ಷನ್ ಸೀನಿನಲ್ಲಿಕಣ್ಣು ಮುಚ್ಚಿಕೊಂಡುತಲೆ ತಗ್ಗಿಸಿ ಕುಳಿತು ಬಿಡುತ್ತಿದ್ದೆವು. ನಮ್ಮ ಪಕ್ಕದ ಮನೆಯ ವಿಜಯಕ್ಕನಂತೂರಸ್ತೆಯಲ್ಲಿ ಬರುವಾಗಲೂ ಬಿಕ್ಕಿ ಬಿಕ್ಕಿ ಅಳುತ್ತಾ ಬರುತ್ತಿದ್ದರು. ಪಾಪ ಅವರಗಂಡ ನಾಚಿಕೆಯಿಂದ ಮುಂದೆ ಮುಂದೆಓಡುತ್ತಿದ್ದರು. ಸಿನಿಮಾ ನೋಡಿದ ಮಾರನೆ ದಿನ ಅವರ ಮುಖ ಕಣ್ಣು ನೋಡಿದರೆ "ಯಾರೋ ಹೊಡೆದಿರ ಬೇಕು ಎನ್ನುವಷ್ಟರ ಮಟ್ಟಿಗೆ ಬಾತಿರುತ್ತಿತ್ತು. ನಮ್ಮಚಿಕ್ಕಮ್ಮನಜೊತೆಗೆ ಸಿನಿಮಾಕ್ಕೆ ಹೋಗುವುದೆಂದರೆ ಅದೊಂದುದೊಡ್ಡ ಪಿಕ್‌ನಿಕ್. ಸಿನಿಮಾಕ್ಕೆ ಹೋಗುವಾಗ ಮನೆಯಲ್ಲಿದ್ದಚಕ್ಕುಲಿಯನ್ನೋ ಕೋಡುಬಳೆಯನ್ನೋ ಪೊಟ್ಟಣಕಟ್ಟಿತೆಗೆದುಕೊಂಡು ಹೋಗುತ್ತಿದ್ದರು. ಸಿನಿಮಾ ಶುರುವಾಗುತ್ತಿದ್ದಂತೆಯೇ ನಮಗೆಲ್ಲರಿಗೂ ಹಂಚುತ್ತಿದ್ದರು. ನಮ್ಮೆಲ್ಲರ ಬಾಯಿಯಕರುಂಕುರುಂ ಶಬ್ಧ ಮತ್ತುಚಕ್ಕುಲಿಯ ಪರಿಮಳ ಸುತ್ತಮುತ್ತಿನವರ ನಾಸಿಕಾಗ್ರಗಳಿಗೆ ತಲುಪಿ ಎಲ್ಲರೂ ನಮ್ಮತ್ತ ನೋಡಿದರೂ ನಾವು ತಿನ್ನುವುದರಲ್ಲೂ ನೋಡುವುದರಲ್ಲೂ ತಲ್ಲೀನರಾಗುತ್ತಿದ್ದೆವು. ಇನ್ನುದೇವರ ಸಿನಿಮಾ ಏನಾದರೂ ಬಂತೆಂದರೆ ನಮ್ಮೂರಿನ ಮತ್ತು ಸುತ್ತ ಮುತ್ತಿನ ಹಳ್ಳಿಯ ಮುದುಕ ಮುದುಕಿಯರೆಲ್ಲಾತಪ್ಪದೆ ಸಿನಿಮಾ ನೋಡಲು ಬರುತ್ತಿದ್ದರು. ಸಿನಿಮಾ ಪರದೆಯ ಮೇಲೆ ದೇವರು ಪ್ರತ್ಯಕ್ಷವಾಗುತ್ತಿದ್ದಂತೆಯೇ "ಅಡ್‌ಬಿದ್ದೆ ನಮ್ಮಪ್ಪಾ" ಎಂದುಜೋರಾಗಿ ಭಾವ ಪರವಶರಾಗಿಉದ್ಗರಿಸುತ್ತಿದ್ದರು!

ಮೈಸೂರಿನಲ್ಲಿಕಾಲೇಜು ಮೆಟ್ಟಲೇರಿದಿ ಬಳಿಕ ಸಿನಿಮಾ ಹುಚ್ಚೂ ಸ್ವಲ್ಪ ಜಾಸ್ತಿಯಾಯಿತು. ಅಲ್ಲಿಯಥಿಯೇಟರ್ ನಮ್ಮ ಶಿವಾಜಿ ಥಿಯೇಟರ್‌ಗೆ ಹೋಲಿಸಿದರೆ ಬಹಳ ಸುಂದರ. ಎಲ್ಲಾಥಿಯೇಟರ್‌ನಲ್ಲೂ ಬಾಲ್ಕನಿ ಇತ್ತು. ಮೈಸೂರಿನಲ್ಲಿ ಹಿಂದೀ ಸಿನಿಮಾ ನೋಡುವ ಹುಚ್ಚು. ನಿಜ ಹೇಳಬೇಕೆಂದರೆ ಆಗ ಸಿನಿಮಾದ ಸಂಭಾಷಣೆಗಳು ಏನೇನೂ ಅರ್ಥವಾಗುತ್ತಿರಲಿಲ್ಲ. ಆದರೆಹಿಂದಿ ಸಿನಿಮಾ ನೋಡದೆ ಹೋದರೆ ನಮ್ಮಘನತೆ ನಮ್ಮ ಗೆಳತಿಯರ ನಡುವೆಕಮ್ಮಿಯಾಗುತ್ತದೆ ಎನ್ನುವಕಾರಣಕ್ಕಾಗಿ ಹಿಂದಿ ಸಿನಿಮಾ ನೋಡುತ್ತಿದ್ದೆವು. ಮೈಸೂರಿನಲ್ಲಿ ಸಿನಿಮಾಜೊತೆಗೆ ಹೋಟೆಲ್ ವಿಸಿಟ್ ಕೂಡಾಕಡ್ಡಾಯವಾಗಿತ್ತು. ನಮ್ಮೂರಿನಥಿಯೇಟರ್‌ನಲ್ಲಿ ಕಡಲೆಕಾಯಿಯಿಂದಲೇ ತೃಪ್ತಿ ಹೊಂದಿದ್ದ ನಾಲಿಗೆಗೆ ಮೈಸೂರಿಗೆ ಹೋದ ಮೇಲೆ ಇಂದ್ರ ಭವನದಜಾಮೂನು, ಮಸಾಲೆ ದೋಸೆ, ಕಾಫಿಯ ಔತಣ. ಮೈಸೂರಿನಲ್ಲಿ ಬಾಲ್ಕನಿಯಲ್ಲೇ ಸಿನಿಮಾ ವೀಕ್ಷಣೆ!

ಮುಂಬಯಿಗೆ ಬಂದ ನಂತರ ಬೇರೆಯೇಅನುಭವ. ಸಿನಿಮಾ ಗೃಹಗಳೆಲ್ಲಾ ಮನೆಯಿಂದ ಬಹು ದೂರ. ಸಿನಿಮಾ ನೋಡಲು ಹೋಗುವುದೆಂದರೆ ಹರಸಾಹಸ. ಒಂದೆರಡು ದಿನ ಮೊದಲೇ ಹೋಗಿ ಬುಕ್ ಮಾಡಿ ಬರದಿದ್ದರೆ ಬ್ಲ್ಯಾಕ್‌ನಲ್ಲಿ ಟಿಕೆಟ್‌ಖರೀದಿಸ ಬೇಕಾಗುವ ಪರಿಸ್ಥಿತಿ. ಸಿನಿಮಾ ನೋಡಿದ ನಂತರ ಹೋಟೆಲ್ಲಿನ ಭೇಟಿಎಂದರೆಅರ್ಧ ದಿನ ವ್ಯರ್ಥ ಮತ್ತುಅದರಜೊತೆಗೆಜೇಬಿನಲ್ಲಿದ್ದ ಕಾಸೂ ಸಾಕಷ್ಟು ಕರಗುತ್ತಿತ್ತು. ಹಾಗಾಗಿ ಸಿನಿಮಾ ಗೀಳು ಸ್ವಲ್ಪಕಡಿಮೆಯಾಗುತ್ತಿದ್ದ ವೇಳೆಗೆ ಮುಂಬಯಿಯಲ್ಲಿ ಎಲ್ಲೆಡೆತಲೆ'ಎತ್ತಿತು ಮಾಲ್ ಮತ್ತು ಮಲ್ಟಿಪ್ಲೆಕ್ಸ್‌ಗಳು. ಒಂದೇಕಡೆ ನಾಲ್ಕರಿಂದ ಹನ್ನೆರಡು ಥಿಯೇಟರ್‌ಗಳು. ದಿನಕ್ಕೆ ಹತ್ತರಿಂದ ಹದಿನೈದು ಶೋಗಳು. ಮನೆಯಿಂದಲೇಟಿಕೆಟ್‌ಖರೀದಿಸುವ ಸೌಲಭ್ಯ. ಏನುಂಟು ಏನಿಲ್ಲ. ಕಿಸೆಯಲ್ಲಿ ಹಣವೊಂದಿದ್ದರೆ ಬೇಕಾದ್ದೆಲ್ಲಾ ಉಂಟು. ಥಿಯೇಟರ್ ಒಳಗೆ ಎಲ್ಲರಕೈಯಲ್ಲೂದೊಡ್ಡ ಬಾಕ್ಸ್ ಪಾಪ್‌ಕಾರ್ನ್. ಆದರೆಕರುಂಕುರುಂ ಚಕ್ಕುಲಿ ಜಗಿಯುತ್ತಾ ಸಿನಿಮಾ ನೋಡುತ್ತಿದ್ದ ಮಜವೇ ಬೇರೆಎನ್ನಿಸುತ್ತದೆ.

✍ **ರಮಾ ಉಡುಪ**
ಸಹ ಸಂಶೋಧಕಿ, ಮುಂಬಯಿ ವಿ.ವಿ.

# ಪತ್ರಕರ್ತ ಶ್ರೀನಿವಾಸ ಜೋಕಟ್ಟೆಯವರ ಸಾಹಿತ್ಯ ಸಾಧನೆ



**ದೂರದ ಮುಂಬೈಯಲ್ಲಿ ನೆಲೆಸಿ ಕನ್ನಡದ ತೇರನೆಳೆಯುವ ಕಾಯಕದಲ್ಲಿ ನಿರತರಾಗಿರುವ ಶ್ರೀನಿವಾಸ ಜೋಕಟ್ಟೆ ಅವರದು ನಾನಾ ಬಗೆಯ ವ್ಯಕ್ತಿತ್ವ. ಅವರು ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ವೈವಿಧ್ಯಮಯವಾದ ಅವರ ೨೧ ಕೃತಿಗಳು ಈ ವರೆಗೆ ಬೆಳಕು ಕಂಡಿವೆ. ಜೋಕಟ್ಟೆ ಅವರ ಮಾವೋವಾದಿಗಳ ಹಿಂದೂರಾಷ್ಟ್ರ ನೇಪಾಳ ಕೃತಿಗೆ ಸಾಹಿತ್ಯ ಅಕಾಡೆಮಿ ಪುರಸ್ಕಾರ ಪ್ರಾಪ್ತವಾಗಿದ್ದು ಇತ್ತಿಚೆಗೆ ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. ಆ ನಿಮಿತ್ತ ಶ್ರೀನಿವಾಸ ಜೋಕಟ್ಟೆ ಅವರ ಸಾಹಿತ್ಯ ಸಾಧನೆಯ ಕಿರುನೋಟ ಇಲ್ಲಿದೆ.**

✍ ಡಾ. ಜಿ. ಎನ್. ಉಪಾಧ್ಯ

ಕಥೆ, ಕಾವ್ಯ, ಅಂಕಣ ಬರಹ, ಪ್ರವಾಸ ಲೇಖನ, ವಿಮರ್ಶೆ, ಸಾಂದರ್ಭಿಕ ಲೇಖನಗಳು ಹೀಗೆ ಆಧುನಿಕ ಕನ್ನಡ ವಾಙ್ಮಯದ ನಾನಾ ಪ್ರಕಾರಗಳನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮಗಳನ್ನಾಗಿ ಮಾಡಿಕೊಂಡು ಬರವಣಿಗೆ ಕೃಷಿಯಲ್ಲಿ ನಿರತರಾಗಿರುವ ಶ್ರೀನಿವಾಸ ಜೋಕಟ್ಟೆ ಅವರದು ಕ್ರಿಯಾಶೀಲ ವ್ಯಕ್ತಿತ್ವ. ಬಂಡಾಯ ಸಾಹಿತ್ಯ ಸಂಘಟನೆಯಲ್ಲಿಯೂ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡ ಅವರು ಸರ್ವ ಕುತೂಹಲಿ. ಅವರ ಬರವಣಿಗೆಯನ್ನು ಎರಡು ರೀತಿಯಲ್ಲಿ ವಿಂಗಡಿಸಬಹುದು. ಒಂದು, ಪತ್ರಿಕಾ ಸಾಹಿತ್ಯ, ಇನ್ನೊಂದು ಕಥೆ ಕಾವ್ಯ ಇತ್ಯಾದಿ ಸೃಜನಶೀಲ ಪ್ರಕಾರ. ಈ ಎರಡೂ ಬಗೆಯ ಸಾಹಿತ್ಯ ಪರಸ್ಪರ ಪ್ರಭಾವ ಬೀರಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಹೀಗಾಗಿ ಶ್ರೀನಿವಾಸರ ಕಥೆ,ಕವಿತೆಗಳು ಕೆಲವೊಮ್ಮೆ ಪತ್ರಿಕಾ ವರದಿಯ ರೂಪವನ್ನು ತೊಟ್ಟುಕೊಂಡು ಅನ್ವೇಷಣೆಯಲ್ಲಿ ತೊಡುಗತ್ತವೆ.

ಶ್ರೀನಿವಾಸ ಜೋಕಟ್ಟೆ ಅವರು ಸೂಕ್ಷ್ಮ ಸಂವೇದನೆಯ ಪತ್ರಕರ್ತ, ಲೇಖಕ, ಸಾಹಿತಿ. ಸದ್ಯ ಅವರು ಮುಂಬೈನ ಕರ್ನಾಟಕ ಮಲ್ಲ ಕನ್ನಡ ದೈನಿಕದಲ್ಲಿ ಹಿರಿಯ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕ್ಷಮಿಸಿ ಈ ಚಿತ್ರಕ್ಕೆ ಹೆಸರಿಲ್ಲ ಅವರ ಕಾವ್ಯಕೃತಿ. ಪರಾವಲಂಬಿ, ಹೃದ್ಗತ , ದೇವಕಿಯ ಪತ್ರಗಳು, ಕೊನೆಯ ಸದ್ದು ಅವರ ಪ್ರಕಟಿತ ಕಥಾ ಸಂಕಲನಗಳು. ಗಾಂಧಿಯಿಂದ ಗಾವ್ಲಿ ತನಕ ಇದು ಭಿನ್ನ ಬಗೆಯ ಲೇಖನಗಳ ಸಂಗ್ರಹ. ಇವಲ್ಲದೆ ಮಾಯಾಲೋಕದ ಒಳಗುಟ್ಟುಗಳು, ಸಂಚಾರ ಸಾಗರ ಮತ್ತು ಮಿಲೇನಿಯಂ ಸೂರ್ಯ, ಬದಲಾದ ಮುಖಗಳು, ಸ್ಪಟಿಕದ ಶಲಾಕೆಯಂತೆ ಹಾಗೂ ಭ್ರಾಮಕ ಜಗತ್ತು ಲೇಖನಗಳ ಸಂಕಲನಗಳಾಗಿವೆ. ಜೋಕಟ್ಟೆ ಅವರು ಸ್ವತಃ ಲೇಖಕ, ಪತ್ರಕರ್ತ, ಕಥೆಗಾರ ಕವಿಯಾಗಿರುವುದರಿಂದ ನಮ್ಮ ಇವತ್ತಿನ ಸಾಮಾಜಿಕ ಸಂದರ್ಭದಲ್ಲಿ ನಿಂತು ಬದುಕನ್ನು ಚೆನ್ನಾಗಿ ವಿಶ್ಲೇಷಿಸುವುದಕ್ಕೆ ಅವರಿಗೆ ಸಾಧ್ಯವಾಗಿದೆ. ಅವರು ತಮ್ಮ ಬರವಣಿಗೆಯಲ್ಲಿ ಇಂದಿಗೆ ಜರೂರಾಗಿರುವ ಕೆಲವು ವಿಚಾರಗಳನ್ನು ಹೇಳಲು ಪ್ರಯತ್ನಿಸುತ್ತಾ ಬಂದಿದ್ದಾರೆ. ಹೊಸ ಬದುಕಿಗೆ ಅನುಗುಣವಾಗಿ ತಲೆಯೆತ್ತುವ ಹೊಸ ಸಂವೇದನೆಯನ್ನು ಜತೆಗೆ ವರ್ತಮಾನದ ನಗರದ ಬದುಕಿನ ನಾನಾ ಮುಖಗಳಿಗೆ ಅವರು ಕನ್ನಡಿ ಹಿಡಿಯುತ್ತಾ ಬಂದಿರುವುದು ಅವರ ಬರವಣಿಗೆಯ ವೈಶಿಷ್ಟ್ಯ.

ಶ್ರೀನಿವಾಸರು ಮೆಚ್ಚಿಕೊಂಡ ಮೌಲ್ಯಗಳು ಕಾರ್ಯನಿರತ ಪತ್ರಕರ್ತನೊಬ್ಬ ತುರ್ತಿನಿಂದಾಗಿ ಮೈಗೂಡಿಸಿಕೊಂಡಥವುಗಳಲ್ಲ. ಎಷ್ಟು ಸೊಗಸಾಗಿರಬಲ್ಲ ಬದುಕು ಎಷ್ಟು ಹೊಲಸಾಗಿದೆಯಲ್ಲ ಎಂಬ ರೋಷ, ಆ ಸಾತ್ವಿಕ ಕೋಪದ ಹಿಂದೆ ಬದುಕನ್ನು ಉತ್ತಮಗೊಳಿಸಲು ಸಾಧ್ಯ ಎಂಬ ನಂಬಿಕೆಯೂ ಅವರ ಬರವಣಿಗೆಯಲ್ಲಿ ಎದ್ದುಕಾಣುತ್ತದೆ. ಬದುಕು ಬರಹವನ್ನು ಒಂದಾಗಿಸುತ್ತಾ ಜನಪರವಾದ ಸಾಂಸ್ಕೃತಿಕ ಹೋರಾಟದಲ್ಲಿ ತೊಡಗಿಸಿಕೊಂಡಿರುವ ಅವರು ಪ್ರಗತಿಪರ ಚಿಂತಕ, ಹಾಗೆಯೇ ಒಳ್ಳೆಯ ಸಂಘಟಕ. ವಿಚಾರಭಾರತಿ, ಬೆಳ್ಳಿ ಬೆಳಕು, ಮುಂಬೆಳಕು ಮೊದಲಾದ ಕೃತಿಗಳನ್ನು ಅವರು ಸಂಪಾದಿಸಿಕೊಟ್ಟಿದ್ದಾರೆ. ಕರ್ನಾಟಕ ಸಂಘದ ಮುಖವಾಣಿ ಸ್ನೇಹ ಸಂಬಂಧ(ಮಾಸಿಕ) ಸಂಪಾದಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಸ್ನೇಹ ವಿಶ್ವಾಸಕ್ಕೆ ಹೆಸರಾಗಿರುವ ಜೋಕಟ್ಟೆ ಕರ್ನಾಟಕ ಸಂಘದ ಗೌರವ ಪ್ರಧಾನ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಕಳೆದ ಮೂರು ದಶಕಗಳಿಂದ ಅವರು ಬರೆದ ಕತೆ, ಕವಿತೆ, ಸಂದರ್ಶನ ಬರೆಹಗಳು, ಲೇಖನಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಬೆಳಕು ಕಂಡು ಅಪಾರ ಓದುಗರ ಮೆಚ್ಚುಗೆಗೆ ಪಾತ್ರರಾಗಿರುವುದು ಸಾಮಾನ್ಯ ಸಂಗತಿಯಲ್ಲ. ಜೋಕಟ್ಟೆ ಅವರ ಬರವಣಿಗೆಯ ಶೈಲಿ ನೇರ, ಸರಳ, ಆಕರ್ಷಕ. ಸಾಂಪ್ರದಾಯಿಕ ಹಿನ್ನೆಯೆಯಿಂದ ಬಂದರೂ ಅವರು ಚಿಕಿತ್ಸಕ ದೃಷ್ಟಿಕೋನವನ್ನು ಮೈಗೂಡಿಸಿಕೊಂಡ ವಿಚಾರವಾದಿ, ಚಿಂತಕ. ಸರಳ ಸಜ್ಜನಿಕೆಗೆ ಹೆಸರಾದ ಅವರು ಸ್ನೇಹನಿಧಿ, ನಾಡಿನ ಹಿರಿಕಿರಿಯ ಸಾಹಿತಗಳೊಂದಿಗೆ ಒಡನಾಟವಿಟ್ಟುಕೊಂಡಿರುವ ಶ್ರೀನಿವಾಸ ಜೋಕಟ್ಟೆ ಮುಂಬೈ ಕನ್ನಡಿಗರ ಅಭಿಮಾನದ ಮೂರ್ತಿ. ಶ್ರೀನಿವಾಸ ಜೋಕಟ್ಟೆ ಅವರದು ಹೋರಾಟದ ಬದುಕು. ಅವರು ತಮ್ಮನ್ನು ತಾವು ರೂಪಿಸಿಕೊಂಡರು. ಅವರು ಓದಿದ್ದು, ವಾಣಿಜ್ಯ ಶಾಸ್ತ್ರವನ್ನು. ಕನ್ನಡದ ಆಕರ್ಷಣೆಗೆ ಒಳಗಾಗಿ ಶ್ರಮಪಟ್ಟು ಸಾಹಿತ್ಯದಲ್ಲಿ ಪ್ರಭುತ್ವವನ್ನು ಗಳಿಸಿ ಓದುಗರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದಾರೆ. ಕನ್ನಡದಲ್ಲಿ ಸಹೃದಯದ ತಿಳುವಳಿಕೆಯನ್ನು ವಿಸ್ತರಿಸಲು ಅನುಕೂಲವಾಗುವಂಥ ಕೆಲವು ಒಳ್ಳೆಯ ಕೃತಿಗಳನ್ನೂ ಅವರು ರಚಿಸಿದ್ದಾರೆ. ಭೂಗತ ಜಗತ್ತಿನ ವಿದ್ಯಮಾನಗಳಿಗೆ ಕನ್ನಡಿ ಹಿಡಿಯುವ ಮುಂಬೈ ಅಂಡರ್‌ವರಲ್ಡ್ ಕೃತಿ ಅನೇಕ ದೃಷ್ಟಿಯಿಂದ ನಮ್ಮ ಗಮನ ಸೆಳೆಯುತ್ತದೆ. ಮಾಯಾನಗರಿ ಮುಂಬೈಯ ಅಂತರಂಗ ಬಹಿರಂಗವನ್ನು ಅವರು ತಮ್ಮ ಕೃತಿಗಳಲ್ಲಿ ಬಹುರೋಚಕವಾಗಿ ದಾಖಲಿಸಿದ್ದಾರೆ.

ಪ್ರತಿಭಾವಂತ ಲೇಖಕ ಜೋಕಟ್ಟೆ ಅವರಿಗೆ ಅಖಿಲ ಭಾರತೀಯ ಅಗ್ನಿಶಿಖಾ ಮಂಚ್‌ನ ವತಿಯಿಂದ ೧೯೯೭ರಲ್ಲಿ ಅಗ್ನಿಶಿಖಾ ಮಂಚ್ ಪ್ರಶಸ್ತಿ, ಬೆಂಗಳೂರಿನ ಪತ್ರಕರ್ತರ ವೇದಿಕೆ ಕೊಡಮಾಡುವ ೨೦೦೫ರ ಹೂಗಾರ್ ಸ್ಮಾರಕ ಮಾಧ್ಯಮ ಪ್ರಶಸ್ತಿ, ಮುಂಬಯಿಯ ಐಡಿಯಲ್ ಜರ್ನಲಿಸ್ಟ್ ಎಸೋಸಿಯೇಶನ್‌ನ ವತಿಯಿಂದ ಸ್ವಾತಂತ್ರ್ಯ ಸಂಗ್ರಾಮಕ್ಕೆ ೧೫೦ ವರ್ಷ ತುಂಬಿದ ಪ್ರಯುಕ್ತ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಗೈದವರಲ್ಲಿ ಪತ್ರಿಕೋದ್ಯಮ ಕ್ಷೇತ್ರ ವಿಭಾಗದಲ್ಲಿ ಪತ್ರಕಾರ್ ರತ್ನ ಪ್ರಶಸ್ತಿ ಲಭಿಸಿವೆ. ೧೯೯೯ರ ವರ್ಧಮಾನ ಉದಯೋನ್ಮುಖ ಸಾಹಿತ್ಯ ಪ್ರಶಸ್ತಿ, ಕಲಾಜಗತ್ತು ಮುಂಬಯಿ ೨೦೦೮ರಲ್ಲಿ ಆಯೋಜಿಸಿದ ಬೊಂಬಾಯಿಡ್ ತುಳುನಾಡು ಸಂದರ್ಭದಲ್ಲಿ ತುಳುನಾಡ ಪ್ರಶಸ್ತಿ ಸ್ವೀಕಾರ, ನಂದಳಿಕೆಯ ಕವಿ ಮುದ್ದಣ ಸ್ಮಾರಕ ಮಿತ್ರ ಮಂಡಳಿ ರಜತ ಹಬ್ಬದ ಪುರಸ್ಕಾರ, ಮಲಾಡ್ ಕನ್ನಡ ಸಂಘದ ದಶಮಾನೋತ್ಸವದಲ್ಲಿ ಗೌರವಕ್ಕೆ ಭಾಜನರಾಗಿದ್ದಾರೆ. ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಗೌರವ ಪುರಸ್ಕಾರಕ್ಕೂ ಅವರು ಪಾತ್ರರಾಗಿದ್ದಾರೆ.

ಶ್ರೀನಿವಾಸ ಜೋಕಟ್ಟೆ ಅವರು ಪ್ರವಾಸಪ್ರಿಯರು. ಕಾಲಿಗೆ ಚಕ್ರ ಕನಸಿಗೆ ಕಣ್ಣು ಟೂರ್‌ಟೈಮ್ ಇದು ಅವರ ಒಂದು ಕೃತಿಯ ಹೆಸರು. ಅಷ್ಟೇ ಅಲ್ಲ, ಇದು ಅವರ ಮನೋಧರ್ಮವೂ ಹೌದು. ನಮ್ಮ ದೇಶದ ವೈವಿಧ್ಯ, ವೈಶಿಷ್ಟ್ಯ, ಬಹುಸಂಸ್ಕೃತಿಗಳ ನಾನಾ ಮುಖಗಳ ಅನಾವರಣವನ್ನು ಅವರು ತಮ್ಮ ಪ್ರವಾಸ ಕಥನಗಳಲ್ಲಿ ಮೊಗಮೊಗೆದುಕೊಡುತ್ತಾ ಬಂದಿರುವುದು ಗಮನೀಯ ಅಂಶ. ಮಾವೋವಾದಿಗಳ ಹಿಂದೂ ರಾಷ್ಟ್ರ ನೇಪಾಳ ಅವರ ಮಹತ್ವದ ಪ್ರವಾಸ ಕಥನ. ಈ ಕೃತಿಗೆ ೨೦೧೨ರ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ ಲಭಿಸಿದೆ. ನಮ್ಮ ನೆರೆಯ ರಾಷ್ಟ್ರ ನೇಪಾಳದ ಇತಿಹಾಸ, ಸಂಸ್ಕೃತಿ ಪರಂಪರೆ, ಇಂದಿನ ವಿದ್ಯಮಾನಗಳ ರೋಚಕ ಕಥನ ಈ ಕೃತಿಯಲ್ಲಿದೆ. ದೂರದ ಮುಂಬೈಯಲ್ಲಿ ನೆಲೆಸಿ ಕನ್ನಡ ಸಾಹಿತ್ಯ ಕೃಷಿಗೈದು ಸಾಹಿತ್ಯ ಅಕಾಡೆಮಿಯ ಗೌರವಕ್ಕೆ ಪಾತ್ರರಾದ ಶ್ರೀನಿವಾಸ ಜೋಕಟ್ಟೆ ಅವರಿಗೆ ಹಾರ್ದಿಕ ಅಭಿನಂದನೆಗಳು.

# MAYA - IGNORANCE ILLUSION

We are living today ignorant of the Real, in our delusions. How did all this happen? This should be the natural question in our minds. An attempt to answer this question has been made in Vedanta by the introduction of the concept 'MAYA'.

Maya is an enigma. Lord Brahma created maya to be the mother of universe. He is the master, we are his slaves. Maya is explained as the inexplicable, inherent power of the supreme which is inseparable from Him as the heat from the fire, cold in the ice, sweetness in the sugar etc. One cannot have fire as an entity without. Heat, electricity, magnetism etc. are all energies in nature which one cannot comprehend directly. They can only be perceived by the effect perceived by our sense organs. Ma means the source or the cause, Ya means that which produces, goes, walks and spreads out. Thus literally maya means that, which issues forth, expands, and arises from the source, Ma, the universal mother. In Hindu scriptures maya is also described as a play (leela) of God enacted as the creative dynamic energy. It is also the force behind all diversity, activity and movement that takes place in the universe. Maya is the vehicle of the supreme.

Maya is the conditioning agent though which the non-dual Truth, the one unique reality seems to spread as the spectrum of multiple universe. On a superficial understanding of this term one gets suspicion that maya is a tricky word introduced by the vedantins to veil and confuse the question with mysterious nothing. Maya stands for that which is not permanent.

Maya is a term introduced in the Vedaanta School of advaita to describe the changing forms in the universe. The original meaning of maya was the creative power of Brahman. This power of the divine magician signifies the psychological state of any one under the spell of the magical show. It confuses myriad forms of the divine play with reality, without perceiving the Brahman, underlying these forms. Maya may not be an illusion by itself but creates some sort of illusion in us which makes us think that shapes and forms and the events are real. Maya has the power of confusing one on the concepts of reality- Maya is a power of two types. One is Vikshepa, the projecting power and the other is Aavarna, the veiling power.

Maya is not an illusion as it is normally interpreted. Maya appears to be real and yet not real. It is real in the sense that the real is behind it and gives it an appearance of reality. That which is real in maya is the reality seen through maya. Yet the real is never seen. It is seen as unreal and has no existence of itself, it is thus a paradox, real, yet unreal, an illusion,, yet not an illusion. Illusion is appearance of things differently from what they are actually.

Maya is nothing but a dream world, where it is all misery, weeping ana crying, where a few gold balls are rolled, and the world scrables over them One enjoyment is only in the senses. The satisfaction of the senses is one of the causes which has spread the veil between truth and ourselves. This is the maya of Vedanta that explains how the truth was there all the time covered by the veil of maya. The celebrated illustration is that of a rope and the snake. The rope did not change into snake. The change of the rope to a snake was apparent only. When the delusion vanishes snake is no more there. Similarly when one is ignorant he sees the phenomenoriand not the truth or the God. Maya is the cause of all phenomena. Thus maya exists or does not exist. It-is non-existence because existence could be said of Absolute only, the unchangeable. Again it cannot be said as non-existence for, if it were, it would not have produced the phenomena. Thus maya is inexpressible (Anirvaachaneya).

The power of an individual to delude himself and to perceive a world of plurality is maya. Many discussions have taken place over this due to misunderstanding that maya is a positive cause and not an hypothetical supposition. Maya is the non-apprehension of the reality.

The soul is sexless. One cannot say that soul is male or female. Then how did it come to earth? That there is only one answer in our scriptures. Soul is omnipresent It is due to one's ignorance that he cannot cognize its presence every-where. It is this ignorance which causes bondage and myseries. This is true in every state of life either social, physical, mental or spiritual. It is the ignorance that makes us hate one other and not iove.

Radhakrishnan interpreted Shankara's understanding of maya as strictly illusion. It has no other existence other than Brahman. It is because of ignorance that one considers that lord's maya shakti or the power of as real. Even if the world enjoys an empirical reality, it is still unreal from the Absolute point of view. Brahman sathya : Jagat mithya, meaning that God Is true, Universe is a dream. The world is an illusion, a play of the consciousness of the supreme God, Brahman. A simple analysis of our perceptual experience establishes, beyond doubt, that the world is not what it appears to be. What we perceive through our senses is just a superficial reality. World is nothing but an illusion because it conceals the truth and reveal differently each time we perceive it. It is an irrefutable fact that the world is not the same all the time. The external world that is perceived through our senses is definitely not the ultimate reality, by virtue of being subjected to changes. It derived its power or support from the Absolute, one which is devoid of all limits, diversions, and distinctions. Radhakrishnan's assertion is the forms and names ceasing to be attractive does not necessarily mean that they cease to exist. He explains that illusion dissipated by scientific knowledge still remains though it no longer leads us astray. One sees the illusion and gives a different value for it. A puddle in a desert is mirage caused by the rising heat of the desert. Mirage is the world while desert is Absolute. Just as the mirage does not disappear when the scientific knowledge is gained about, I what it owes to its existence, the world too does not disappear though it is valued differently. Thus is follows that because of maya one is not able to perceive the real.

✍ **K.N. Kirthi**

What is ignorance? The origin of the ignorance cannot be determined. Even after sufficient enquiry one is unable to determine whether the world of appearances arises from ignorance or ignorance is born out of world's appearance. They

are in fact two aspects of the same thing. The world appears like a mirage of which it can be said that it exists or does not exist. What appears to be the world is its own notions and thoughts. It is based on consciousness. It is similar to an optical illusion with consciousness as its substratum One's self is eternally pure, perfect, and unchangeable. All other things on the earth or in the universe are nothing but appearances in one's self. Hence it is regarded as both real and unreal. In the gold ornaments gold is true, but others are ideas. Thus both the appearances and disappearances of the world are the modifications of ideas. The names and forms are painted on them. If a wave subsides will its form remain? The existence of the wave depends upon the existence of the ocean. The form remains as long as the wave remains. But sooner the wave subsides the form vanishes. Thus the outcome of the names and forms is maya. It is the maya that makes the individual, it makes one appear different from the other. Yet it has not existence. One form alone does not exist since it depends upon the existence of another form. Thus maya, the names and the forms as it is called, time space and causation is out of one infinite existence, showing many folds of its existence, similar to the snow melts and the rains on the mountains producing many rivers and streams.

Nature is maya. tt is really God's nature under the veil of maya. It has n existence of its own. Maya is the energy of the universe. Potential anr Kinetic Ignorance is the cause and sin'is the effect. One has to be saved from the ignorance to be saved from the sin.

Ignorance is the mother of all miseries. One is dying out of thirst sitting or the bank of a river, one is dying out of hunger sitting near a heap of food[c] Here is where one sees maya, hears maya, experience maya. My God is the greatest God. Here is where the evil begins Maya is the real cause of the universe, as well as the creation of the human soul. This is the world of maya.

The pain bearing entities are ignorance, egoism, attachment, aversion and clinging to life. The ignorance is the cause and others are effects Ignorance is the productive field of all that follows, whether they are dormant or awake.

Ignorance is said to be self caused and not caused by any other cause. It is the nature of the cave to have darkness. Darkness in the cave is not caused by the cave. Similarly when the self is not known or comprehended there is darkness in the bosom, it can be removed only by the subjective experiences of the infinite reality.

One who is progressing knows more avenues are opened to pleasure and pain. This is maya. Thus one finds that maya is the theory for the explanation of the formation of the world. It is simply the statement of the facts as they exist, that the very basis of our being itself is contradictory That whenever there is good there must be evil and whenever there is evil there must be some good. If good increases in arithmetical progression, evil will increase in geometrical progression. Whoever smiles must weep and vice-versa. Where ever there is life death follows in shadow. I am the body and not the self which is pure, effulgent, perfect, eternal and ever blissful, is itself the ignorance, lacking discrimination between the Real and unreal. The appearance of a person as a combination of the body, mind and intellect is also an illusion.

Man makes the mistake of separating himself from the God and identifying with his body. This arises out of maya, which is said to be seeing the real as something else and not as it is. This is the bondage of man. He brings in its wake the miseries of birth and death. He considers the perishable body as the real self, identifies himself with it, bathes it, nourishes it, feeds it and preserves it with the help of sense organs. Thereby, he becomes bound like a silkworm in its own cocoon woven by its own threads. Thus bondage springs from his ignorance. It subjects one to endless miseries, birth, decay, senility and finally death.

Lord Krishna says in Ch. 2 Geetha:

dyayato visayan pumsah
sangas testu pajayate sangat samjayate kamah
kamat krodho 'bhijayate'
krodhad bhavati sammohah

sammohat smrtivibhramah smritibhramsaid buddhinaso buddhinasat pranasyati

The eternal play of light, darkness, induiscriminate, indistinguishable and inseparable is always there. A fact at the same time not a fact, awake and at the same time asleep. These are the statements of facts due to maya. One is born in maya, grows in maya live in maya, thinks in maya, dreams in maya, suffers in maya and finally dies in maya. We are the devils as well as Gods in it. We are also the slaves in maya.

Maya is a prison in which we all live. Even if one stretches his ideas as far as he can, takes it to higher level and call it infinite, all these ideas are within maya. Thus the whole human knowledge is the generation of maya. Everything that is bound by laws of causation and the laws of time are in maya.

When a man is Sn deep sleep all the activities of mind intellect and the sense organs are temporarily at rest. This state is an unmanifested state of ignorance. That is why ignorance is blisstThat is also the unmanifested state or power of maya. Thus in one form or the other all of us are in maya, which is the most intricate and difficult to understand. Time is the avenger of anything and everything, saints and sinner, kings and peasants beautiful and ugly and leaves nothing. Everything is rushing towards one goal destruction. This is the maya. The blind leading a blind. They both fall into a ditch and suffer.

The state of human knowledge embraces within its scope the interns and the external worlds of maya. Maya is unreal because it proves it: incorrectness. It is real in the sense of being sufficient for all the needs or a man. Acting in the external world maya manifests itself as two power attraction and repulsion. In the internal world its manifestation is desires and non-desires.

Prakruthi, maya are infinite without beginning or end. The creative energy is still with the lord. God is never at rest. Krishna says in Geetha that if he rests for a moment the whole universe is destroyed. According to Shankara God is both the efficient as well as the material cause for creation. God has never become the universe nor is the universe God. This may be one of the points to understand maya. Brahman is all that exists, but the differentiation is caused by maya. The theory of maya is most difficult to understand in all ages. The mixture of good and evil, knowledge and ignorance is nothing but maya. The wave in the ocean is distinct from the ocean in name and form. It is the same

maya which makes the difference between you and me, animal and man, man and man, man and God. This is that maya that causes the aatman to be caught as if it is in so many millions of being which are distinguished only be name and forms.

Ignorance, inequality and desires are three causes of human misery, each following the other in an inevitable union. Why should a man think himself above any other being including man. This is a bane on human nature, a curse upon the human kind, the root of all misery. This is the source of a!! bondage, physical, mental and spiritual. Maya, prakruthi, etc. are all movinr and changing unfolding veil after veil'. Each individual creates his own universe by bondage. The names and forms are maya only. All the reasonings and arguments are within the limits of the realm of maya. When our minds and senses are active we remain under the influences of maya. When one perceives things in a state of plurality and duality he remains in the domain of maya. From a limited perceptive one experiences duality and plurality-Duality and plurality are the facts of life. It lies within the categories of space, time and causation.

The personal god belong to maya. It is the same Absolute Brahman seen through maya. The absolute Brahman under the control maya is the human soul. Maya is a non-eternal entity or individuality. Brahman and maya cannot be cognized simultaneously. Snake and the rope are two different things. No one can see two things at the same place and at the same time. Once the identity of the rope is established snake vanishes. On the realization of Brahman maya vanishes. God made the heaven, man made the hell for himself, it is the ignorance that converts the Kingdom of Heaven into a veritable hell. One has to come to the idea that his maya is divine. Krishna says is Geetha that whoever takes refuge in me go beyond maya. But one really finds it difficult to cross over maya even after Krishna assurance.

All that is real in nature is Brahman. It appears to be varieties of nature through the superposition of maya. Maya, being the illusion cannot be said to be real. It produces the phenomena. If it is asked how maya being an illusion produces all these varieties answer is what is produced is also ignorance or illusion. Maya destroys itself, kills itself by knowledge. Then what is left is only the Absolute truth, the essence of bliss, peace and existence. It is the unknown knower, unseen seer and the unheard hearer, unspoken speaker.

Work and worship are necessary to overcome maya, to lift the bondage and illusion. Without effort on our part we do not open our eyes and see what we are. Scriptures destroy ignorance, but do not teach God.

Krishna says, in Geetha:
udhared atmana ‘tmanam
na ‘tmanam avasadayet
atman ‘va hy atmano bandhur
atmai ‘va ripur atmanah

Birth, death and living are all the hallucinations produced by the mind. One can see the trees and poles moving sitting in a moving train. One can see moon moving among the clouds. Everything in the universe is in constant motion. One cannot perceive it. All these are the hallucinations of the mind Maya is an apparent existence like a headache without a head. The world is nothing but a vibration of the consciousness in space. It seems to exist even as goblin seems to exist in the eyes of an ignorant. This is a marvelous dream of person who is awake. Yoga Vasist Vasista says to Rama, In

In sleep all the nights are wasted In filling one’s belly days are wasted The life as precious as a jewel Is forfeited for a cowrie shell Oh ignorant fool.

No one knows what he does not know. Less the one knows the more he sure that he knows everything in the worid. The modern agnostics knc that there is no solution for getting out of maya. So they teii us be satisfied with material objects and enjoy life. They believe that the is nothing beyond the material phenomenon. But here again there mistake. What do they mean by life? Do they mean the life of senses ?r. sense organs. The present life means something more than that feehr thoughts and aspirations are a part and parcel of our life. This is maya.

The forgetfulness of our Divine nature is ignorance. This gives us the gurgin: desires in the intellect, thoughts in the mind and actions through boo Prompted by desires the mind whips the sense organs to run after the- errands in the world of their objects, which together is called action (KARMA). Ignorance, desires and actions are called the knots of the he? (Hridaya granthi) in vedantha. It is this knot which prompts actions. Man order to reap the fruits of his actions.is compelled to take independent l'T e under various circumstances of uncertain joys and endless sorrows.

How did maya come to earth? How did delusion occur? Or.e cannot expe an answer for an impossible question. For example, have you stoppe beating your wife? Whatever may be the answer the fact remains. Reaisi cannot produce delusion. It is one delusion that produces the other. Similar to one disease produces the other and not health.

The universe is a cobweb. Mind is the spider. This is maya. All the evils ano the wickedness are but the weaknesses of the imperfect vision of the goodness. The more one thinks of maya, the more is the failure of the intellect. The intellect cannot comprehend maya since it is born out of maya. Maya manifests itself as three distinct qualities, namely, satwa, rajas and tamas. All these are in a state of admixture. The proportion varies frorr individual to individual and also varies in an individual from time to time Conquest of mind leads to conquest of maya. Knowledge ends ignorance a light ends darkness. Even the Gods are not free from the influence of maya

They also experience the duality and plurality. -

Emerson wrote this poem about maya,

Illusion works impenetrable

Weaving webs innumerable Her gay pictures never fail Crowd each other veil on veil Charmer who will be believed By a man who thirsts to be deceived.

Ail these effects of maya are hidden in the 16th chapter of Geetha.

I wish to conclude by saying that there is difference between appearances and reality.

An attempt is made by me to explain maya, ignorance and illusion to the best of my ability and understanding.

Om Tat Sat

# ಕನ್ನಡ ವಿಭಾಗ ಮುಂಬಯಿ ವಿ.ವಿ. ಡಾ. ಶಿವರಾಮ ಕಾರಂತ ದತ್ತಿ ಉಪನ್ಯಾಸ
# ಚೋಮನ ದುಡಿ ಒಂದು ಶಕ್ತಿಯುತ ಕಾದಂಬರಿ –ಪ್ರೊ. ಬರಗೂರು ರಾಮಚಂದ್ರಪ್ಪ



ಮುಂಬಯಿ: ಸಾಹಿತ್ಯದಲ್ಲಿ ಸೈದ್ಧಾಂತಿಕ ವಾಗ್ವಾದಗಳು ನಡೆಯುತ್ತಲೇ ಇರುತ್ತವೆ. ನಾವು ಒಳ್ಳೆಯ ಲೇಖಕರಿಗಿಂತ ಒಳ್ಳೆಯ ಮನುಷ್ಯನಾಗಬೇಕು. ನಿಜವಾದ ಮನುಷ್ಯರಾಗುವ ಪ್ರಕ್ರಿಯೆಯಲ್ಲಿ ತನ್ನನ್ನು ತೊಡಗಿಸಿ ಕೊಂಡಿರುವವರು ಒಂದಿಷ್ಟು ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾರೆ. ಅಂತಹ ವ್ಯಕ್ತಿತ್ವವನ್ನು ಮೈಗೂಡಿಸಿಕೊಳ್ಳಬೇಕು. ಶಿವರಾಮ ಕಾರಂತರ ಪ್ರತಿಭೆಯ ವ್ಯಾಪ್ತಿ ಬಹಳ ದೊಡ್ಡದು. ಅವರು ಸದಾ ಪ್ರಯೋಗಶೀಲ ವ್ಯಕ್ತಿ. ಅವರ ಚೋಮನದುಡಿಯಂತಹ ಮಹತ್ವದ ಕೃತಿಯನ್ನು 21ನೇ ಶತಮಾನದಲ್ಲಿಯೂ ನಾವು ಚರ್ಚೆ ಮಾಡುತ್ತೇವೆ ಎಂದರೆ ಆ ಕೃತಿಗೆ ಅಷ್ಟು ಶಕ್ತಿ ಇದೆ ಎಂದರ್ಥ. ನಾವು ಅಂದಂದಿನ ಚಾರಿತ್ರಿಕ ಸಂಬಂಧವನ್ನು ಅರ್ಥಮಾಡಿಕೊಂಡು ಕೃತಿಯ ಒಳಹೊಕ್ಕಬೇಕು. ಚೋಮನ ಆಸೆ ಅದು ಆ ಕಾಲದ ಚಾರಿತ್ರಿಕ ಘಟನೆಗಳ ರೂಪಕ. ಆರ್ಥಿಕ ಸಾಮಾಜಿಕ ಚಳುವಳಿಗಳ ಪ್ರೇರಣೆ. 'ಚೋಮನದುಡಿ' ಕಾದಂಬರಿಯಾ ಆರಂಭ ಮತ್ತು ಕೊನೆಯ ನಡುವೆ ವಿಷಾದದ ಇತಿಹಾಸ ನಡೆಯುತ್ತದೆ. ಚೋಮನ ಬದುಕೇ ಒಂದು ವಿಷಾದದ ನದಿ. ಭೋಗನಹಳ್ಳಿ ಎಂಬುದೇ ಅವನ ಆಕಾಂಕ್ಷೆಗೆ ಒಡ್ಡಿದ ಜಡತೆ. ಮನುಷ್ಯ, ಪ್ರಾಣಿ, ಪಕ್ಷಿಗಳ ಜೊತೆ ಮಾತನಾಡುವುದೆಂದರೆ ಅದು ಪರಕೀಯ ಪ್ರಜ್ಞೆ ಕಾಡಿದಾಗ. ಇಲ್ಲಿ ಅಂತಹ ಸನ್ನಿವೇಶವನ್ನು ನಾವು ನೋಡಬಹುದು ಎಂದು ಪ್ರೊ ಬರಗೂರು ರಾಮಚಂದ್ರಪ್ಪ ಅವರು ಅಭಿಪ್ರಾಯ ಪಟ್ಟರು. ಅವರು ಇತ್ತೀಚೆಗೆ ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ ಆಯೋಜಿಸಿದ್ದ 'ಸದಾನಂದ ಸುವರ್ಣ ಪ್ರಾಯೋಜಿತ ಡಾ. ಶಿವರಾಮ ಕಾರಂತ ದತ್ತಿ ಉಪನ್ಯಾಸ' ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಅವರು ಮುಂದುವರೆಸುತ್ತಾ ಚೋಮನ ದುಡಿಯ ದುಡಿ ಅದು ಸುಖದ, ಸಂಕಷ್ಟದ, ಯಾತನೆಯ ಸಂಕೇತ. ನಾವು ಈ ಕಾದಂಬರಿಯನ್ನು ಓದುವಾಗ 'ಧರ್ಮದ ಅಥವಾ ಆರ್ಥಿಕ ಪ್ರಲೋಭನೆ ಚೋಮನಿಗೆ ಮುಳುವಾಯಿತೆ? ಅಥವಾ ಸಾಮಾಜಿಕ, ನೈತಿಕತೆಯೇ ಚೋಮನ ದುಡಿಗೆ ಕಾರಣವಾಯಿತೇ ಮೊದಲಾದ ಪ್ರಶ್ನೆಗಳು ಕಾಡುತ್ತವೆ. ಶಿವರಾಮ ಕಾರಂತರ ಪ್ರಕಾರ 'ನೀತಿ'ಎನ್ನುವುದು ಸ್ಥಾಯಿಯಾದುದಲ್ಲ. ಈ ಕೃತಿಯ ಮರು ಓದಿನಿಂದ ಹೊಸತನ್ನು ಕಾಣುವ ತವಕವಿರಬೇಕು. ವಾಸ್ತವ ಲೋಕವನ್ನು ಕಟ್ಟಿಕೊಡುವ ರೂಪಕಾತ್ಮಕತೆ ಈ ಕಾದಂಬರಿಯಲ್ಲಿದೆ. ಚೋಮನ ದುಡಿಯಲ್ಲಿ ಭೂಮಿಯ ಆಸೆ ಇದೆ. ಆದರೆ ಹಕ್ಕು ಇಲ್ಲ. ಭೂಸೂಧಾರಣೆಯ ಹಕ್ಕು ಬಂದಿರಲಿಲ್ಲ. ಇಲ್ಲಿ ಚೋಮ ಭೂಮಿ ಭಕ್ತನೇ ಹೊರತು ಭೂಕಾಯವಲ್ಲ. ವರ್ತಮಾನದ ಸಂದರ್ಭದಲ್ಲಿ ರೈತರು ಮತ್ತು ಅತಿ ಸಣ್ಣ ರೈತರು ಸತ್ತಿರುವುದು, ಯಾಕೆಂದರೆ ಅವರಿಗೆ ಸಾಂಸ್ಥಿಕ ಸಾಲ ದೊರೆತಿಲ್ಲ ಎಂದು ಅವರು ಅಭಿಪ್ರಾಯ ಪಟ್ಟರು.

ಡಾ. ಶಿವರಾಮ ಕಾರಂತರು 1933ರಲ್ಲಿ ಬರೆದ ಚೋಮನ ದುಡಿ ಕಾದಂಬರಿಯ ಕಥಾವಸ್ತು ಇಂದಿಗೂ ಪ್ರಸ್ತುತವಾಗಿದೆ. ದಲಿತ ಸಮುದಾಯದ ಚೋಮ ಭೂಮಿ ಭಕ್ತ. ಆತನಿಗೆ ತನ್ನದೇ ಆದ ಭೂಮಿಯನ್ನು ಹೊಂದಿ ಬೇಸಾಯ ಮಾಡ ಬೇಕೆನ್ನುವ ಆಸೆ. ಆದರೆ ಆ ಆಸೆ ಕೈಗೂಡುವ ಸಾಧ್ಯತೆಯೇ ಇಲ್ಲ. ಅವನ ದುಡಿಯೊಂದೇ ಆತನ ಸುಖದ, ಸಂತೋಷದ, ಸಂಕಟದ ಜೊತೆಗಾರ. ಅಂದಿನ ಸಾಮಾಜಿಕ, ಸಾಂಪ್ರದಾಯಿಕ ನೈತಿಕತೆಯೇ ಅವನನ್ನು ದುರಂತಕ್ಕೆ ತಳ್ಳಿತು. ಅಂದಿನ ಆರ್ಥಿಕ ಅನೈತಿಕತೆಗೆ ಬಲಿಯಾದವಳು ಚೋಮನ ಮಗಳು ಬೆಳ್ಳಿ. ಆದರೆ ಇಂದು ಜಾಗತೀಕರಣದ ನಂತರ ಕೃಷಿ ಪ್ರಧಾನವಾಗಿದ್ದ ನಮ್ಮ ದೇಶ ಉದ್ಯಮ ಪ್ರಧಾನ ಸಮಾಜದತ್ತ ಸಾಗುತ್ತಿದೆ. ಈಗಲೂ ಚೋಮನಂತೆ ಭೂಮಿ ಇಲ್ಲದ ರೈತರು ಮತ್ತು ಚೋಮನಂತೆ ಭೂಮಿ ಇರುವ ರೈತರೂ ದೇಶದ ಎಲ್ಲೆಡೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಸಂಕಪ್ಪಯ್ಯ ಮತ್ತು ಮಿಂಗೇಲನಂತವರು ಈಗಲೂ ಸಂತೋಷದಿಂದ ಇದ್ದಾರೆ ಎಂದು ಖ್ಯಾತ ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪನವರು ಚೋಮನ ದುಡಿಯ ಸಮಕಾಲೀನತೆಯ ಬಗ್ಗೆ ಮಾತನಾಡುತ್ತ ಅಂದಿನ ಮತ್ತು ಇಂದಿನ ದಿನಗಳ ರಾಜಕೀಯ ಪರಿಸ್ಥಿತಿಯ ಬಗ್ಗೆ ವಿಶ್ಲೇಷಿಸಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ವಿಭಾಗದ ಮುಖ್ಯಸ್ಥರಾದ ಡಾ. ಜಿ.ಎನ್. ಉಪಾಧ್ಯ ಅವರು ಒಬ್ಬ ಅಧ್ಯಾಪಕನಾಗಿ ಸಾಂಸ್ಕೃತಿಕ ನೇತಾರ ಎಂದು ಕರೆಯಬಹುದಾದಂತಹ, ಕನ್ನಡದ ಸಾಕ್ಷಿ ಪ್ರಜ್ಞೆ ಡಾ. ಬರಗೂರು ಅವರು.ಕನ್ನಡದ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಅವರು ಮಾಡಿದ ಕಾರ್ಯ ಅಪಾರ. ಸದಾನಂದ ಸುವರ್ಣ ಅವರು ಕೊಡಮಾಡುವ ದತ್ತಿ ಉಪನ್ಯಾಸದಲ್ಲಿ ಡಾ.ಶಿವರಾಮ ಕಾರಂತರ ಕುರಿತಾಗಿ ಉಪನ್ಯಾಸ ನೀಡಲು ಬಂದಿರುವುದು ನಮ್ಮ ಭಾಗ್ಯ ಎಂದು ನುಡಿದು ಕನ್ನಡ ವಿಭಾಗದ ಸಾಧನೆಗಳನ್ನು ತೆರೆದಿಟ್ಟರು.

ಇದೇ ಸಂದರ್ಭದಲ್ಲಿ ಡಾ.ಜಿ.ಎನ್.ಉಪಾಧ್ಯ ಅವರು ಸಂಪಾದಿಸಿರುವ ಡಾ.ಬಿ.ಎ.ಸನದಿ ಅವರ ಆಯ್ದ ಕವಿತೆಗಳ ಅನುಸಂಧಾನ 'ಸಹೃದಯ ಸ್ಪಂದನ', ಹಾಗೂ ಡಾ.ವಿಶ್ವನಾಥ ಕಾರ್ನಾಡರ ಎರಡು ಕೃತಿ ಹಿಂದಿರುಗಿ ಬಂದವನು, ಕಲಾ ವಸಂತದ ಮಾಮರ ಕೃತಿಗಳನ್ನು ಪ್ರೊ.ಬರಗೂರು ರಾಮಚಂದ್ರಪ್ಪ ಅವರು ಬಿಡುಗಡೆಗೊಳಿಸಿದರು. ವಿಭಾಗದ ಸಂದರ್ಶಕ ಪ್ರಾಧ್ಯಾಪಕರಾದ ಡಾ. ರಘುನಾಥ್ ಹಾಗೂ ಸಹ ಪ್ರಾಧ್ಯಾಪಕಿ ಡಾ. ಪೂರ್ಣಿಮಾ.ಎಸ್.ಶೆಟ್ಟಿ ಕೃತಿಗಳನ್ನು ಪರಿಚಯಿಸಿದರು. ಖ್ಯಾತ ಕಲಾವಿದ ದೇವುದಾಸ ಶೆಟ್ಟಿ ಅವರ ಚಿತ್ರಕಲಾ ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು. ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಡಾ.ಗಿರಿಜಾ ಶಾಸ್ತ್ರಿ, ಸಂಶೋಧನಾ ಸಹಾಕಯಕರಾದ ರಮಾ ಉಡುಪ, ವಿಧುಷಿ ಶ್ಯಾಮಲಾ ಪ್ರಕಾಶ್,ಗೀತಾ ಎಸ್.ಆರ್, ಪರಸಪ್ಪ ಹರಿಜನ, ಹೇಮಾ ಸದಾನಂದ ಅಮೀನ್ ಮೊದಲಾದವರು ಭಾಗವಹಿಸಿದರು. ಕಾರ್ಯಕ್ರಮದಲ್ಲಿ ಬಿ.ಎಸ್.ಕುರ್ಕಾಲ್, ಎಸ್.ಕೆ .ಸುಂದರ್, ವಸಂತ ಕಲಕೋಟಿ, ಮಿತ್ರಾ ವೆಂಕಟ್ರಾಜ್, ವೆಂಕಟ್ರಾಜ್, ರತ್ನಾಕರ ಶೆಟ್ಟಿ ಉಪಸ್ಥಿತರಿದ್ದರು.

# ಮೈಸೂರು ಅಸೋಸಿಯೇಷನ್‌ಗೆ 90 ವರ್ಷದ ಹುಟ್ಟುಹಬ್ಬದ ಸಡಗರ



ಮೈಸೂರು ಅಸೋಸಿಯೇಷನ್‌ನಲ್ಲಿ 90ನೇ ವರ್ಷದ ಹುಟ್ಟುಹಬ್ಬದ ಸಂಭ್ರಮದಲ್ಲಿ ಭಾಗವಹಿಸಿದ ಸದಸ್ಯರು

ಮುಂಬೈನ ಮಾಟುಂಗಾದಲ್ಲಿರುವ ಮೈಸೂರು ಅಸೋಸಿಯೇಷನ್ ಮುಂಬೈನಲ್ಲಿರುವ ಕನ್ನಡ ಸಂಘ ಸಂಸ್ಥೆಗಳಲ್ಲಿ ತನ್ನದೇ ಆದ ಒಂದು ಸ್ಥಾನವನ್ನು ಕಾಪಿಟ್ಟಿಕೊಂಡು ಬಂದಿದೆ. ಇದೇ ಫೆ. 27 ರಂದು ಅಸೋಸಿಯೇಷನ್‌ಗೆ ಆರಂಭವಾದ ದಿನದಿಂದ 90 ವರ್ಷ ತುಂಬಿ 91 ವರ್ಷಕ್ಕೆ ಕಾಲಿಟ್ಟಿದೆ. ಈ ಒಂದು ದೀರ್ಘ ಪಯಣದ ನೆನಪನ್ನು ಮತ್ತೆ ಹೊಸತಾಗಿಸಿಕೊಳ್ಳುವ ಉದ್ದೇಶದಿಂದ ಶನಿವಾರ ಫೆ.27 ರಂದು ಅಸೋಸಿಯೇಷೇನ್ ನಲ್ಲಿ ಎಲ್ಲ ಸದಸ್ಯರೂ ಒಟ್ಟುಗೂಡಿದ್ದರು. ಅತ್ಯಂತ ಹಿಂದಿನ ತಲೆಮಾರಿನಿಂದ ಈಗಿನ ತಲೆಮಾರಿನವರೆಗಿನ ಎಲ್ಲರೂ ಸಂತೋಷದಿಂದ ಸೇರಿದ್ದ ಈ ಸಂದರ್ಭದಲ್ಲಿ ಅಸೋಸಿಯೇಷನ್ ಬೆಳೆದು ಬಂದ ಬಗೆಯನ್ನು ಒಂದು ಸ್ಮೃತಿ ಚಿತ್ರ ದಾಖಲೆಯೊಡನೆ ಡಾ। ಮಂಜುನಾಥ್ ಎಲ್ಲರಿಗೂ ವಿಶದವಾಗಿ ವಿವರಿಸಿದರು. ಕೆಲವು ತುಂಬ ಅದ್ಭುತವಾದ ಗಳಿಗೆಗಳ ಆ ವಿವರ ನೆರೆದವರ ಮನಸ್ಸನ್ನು ಆವರಿಸಿ ಮೂಕರನ್ನಾಗಿಸಿದ್ದು ನಿಜ. ಆನಂತರ ಅಸೋಸಿಯೇಷನ್ನಿನ ಹಿರಿಯ ಸದಸ್ಯರನ್ನು ಗೌರವಿಸಿ ಸ್ಮರಣಿಕೆಯನ್ನಿತ್ತು ಗೌರವಿಸಲಾಯಿತು. ಆ ಎಲ್ಲ ಸದಸ್ಯರೂ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುವಾಗ ಆತ್ಮೀಯತೆಯ ಹರಿವಿನ ಪರಿಚಯ ಮಾಡಿಕೊಟ್ಟರು. ಮೊದಲಿಗೆ ಅತ್ಯಂತ ಹಿರಿಯರೂ ವಜ್ರ ಮಹೋತ್ಸವದ ಕಾಲದಲ್ಲಿ ಅಧ್ಯಕ್ಷರಾಗಿದ್ದವರೂ ಆದ 92 ವರ್ಷದ ಹಿರಿಯರಾದ ಶ್ರೀ. ಚಂಪಕನಾಥ್ ಅವರನ್ನು ಗೌರವಿಸಲಾಯಿತು. ಇವರು ಈಗ ಬೆಂಗಳೂರಿನಲ್ಲಿ ನೆಲೆಸಿರುತ್ತಾರೆ. ಕಾರ್ಯನಿಮಿತ್ತ ಇವರು ಮುಂಬಯಿಗೆ ಬಂದಿದ್ದು ಅಸೋಸಿಯೇಷನ್ನಿನ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ತುಂಬ ಸಂತೋಷಕೊಟ್ಟರು.

ಆನಂತರ ಮುಂಬಯಿನ ಹೆಸರಾಂತ ವಕೀಲರಾಗಿದ್ದ ಶ್ರೀ.ಬಿ.ನಾರಾಯಣ ಸ್ವಾಮಿಯವರ ಪತ್ನಿ ಶ್ರೀಮತಿ ಶಾರದಮ್ಮನವರನ್ನು ಗೌರವಿಸಲಾಯಿತು. ಅವರಿಗೂ ಈಗ 92 ವರ್ಷ ವಯಸ್ಸು. ನ್ಯಾಯಮೂರ್ತಿ ಶ್ರೀಕೃಷ್ಣ ಅವರ ತಾಯಿಯಾದ ಶಾರದಮ್ಮ ಎಲ್ಲರಿಗೂ ಅಮ್ಮನೇ ಆಗಿದ್ದಾರೆ. ಇವರೂ, ಬಿ.ನಾರಾಯಣ ಸ್ವಾಮಿಯವರೂ ಅಸೋಸಿಯೇಷನ್ ಪ್ರಾರಂಭ ಕಾಲದಿಂದಲೂ ಸಂಸ್ಥೆಗಾಗಿ ದುಡಿದಿದ್ದಾರೆ. ಶಾರದಮ್ಮನವರು ಹಾಜರಿರದ ಕಾರಣ ಅವರ ತಂಗಿ ಲೀಲಾ ಜೋಯಿಸ್ ಅವರು ಸನ್ಮಾನ ಸ್ವೀಕರಿಸಿದರು.

ಶ್ರೀ.ಎ.ಎನ್.ರಾಮಪ್ರಸಾದ್ ಮತ್ತು ಶ್ರೀ. ಎಚ್.ಕೆ.ಸೀತಾರಾಂ ಅಸೋಸಿಯೇಷನ್‌ನ ಆಟೋಟಗಳಲ್ಲಿ ಮುಂಚೂಣಿಯಲ್ಲಿದ್ದು ಅಸೋಸಿಯೇಷನ್‌ಗೆ ಮುಂಬಯಿಯ ಚಾಂಪಿಯನ್‌ಶಿಪ್ ಕಪ್‌ಗೆದ್ದು ತರುವಲ್ಲಿ ವಿಶೇಷ ಕೊಡುಗೆ ಇತ್ತವರು. ಇವರಲ್ಲದೆ ಅಸೋಸಿಯೇಷನ್‌ಗೆ ಧನಸಹಾಯ ಮಾಡುವುದಾಗಲೀ, ಕಲಾಕ್ಷೇತ್ರದಲ್ಲಿ ಕೊಡುಗೆ ನೀಡುವುದಾಗಲೀ ಕೆಲಸ ಕಾರ್ಯಗಳಲ್ಲಿ ಸ್ವಯಂ ಪ್ರೇರಣೆಯಿಂದ ತೊಡಗಿಕೊಂಡು ನಡೆಸುವುದರಲ್ಲಾಗಲೀ ಸಹಾಯ ಮಾಡಿದ ಶ್ರೀಮತಿ ಸತ್ಯವತಿ ಪ್ರಸನ್ನ, ಶ್ರೀಮತಿ ಸುಶೀಲಮ್ಮ ರಾಮಣ್ಣ, ಶ್ರೀಮತಿ ಅನಸೂಯ ಅಯ್ಯಂಗಾರ್, ಡಾ.ಎಚ್.ಎಸ್.ಶ್ರೀನಿವಾಸ್, ಶ್ರೀ.ಸಿ.ಆರ್. ವೆಂಕಟೇಶ್, ಶ್ರೀ.ಕೆ.ಎನ್.ಕೀರ್ತಿ, ಶ್ರೀ.ಬಿ.ಎಂ.ಬೆಲೇರಿ, ಶ್ರೀ.ಎಚ್.ಆರ್.ವಸಂತ್, ಡಾ.ಬಿ.ಆರ್.ಮಂಜುನಾಥ್ ಮತ್ತು ಶ್ರೀ.ಕೆ.ಮಂಜುನಾಥಯ್ಯ ಮುಂತಾಗಿ ಎಲ್ಲರ ಕೊಡುಗೆಯನ್ನು ಸ್ಮರಿಸಿ ಗೌರವಿಸಲಾಯಿತು.


ಶ್ರೀಮತಿ ಶ್ಯಾಮಲಾ ರಾಧೇಶ್ ಸುಶ್ರಾವ್ಯವಾಗಿ ಎರಡು ಭಾವಗೀತೆಗಳನ್ನು ಹಾಡಿ ಎಲ್ಲರ ಮನತಣಿಸಿದರು. ಶ್ರೀ.ನಾರಾಯಣ ನವಿಲೇಕರ್ ಅವರು ನಿಸ್ಸಾರ್ ಅಹಮದ್ ಅವರ ಕಾವ್ಯವನ್ನು ವಾಚಿಸಿ ಹಿಂದೆ ನಡೆಯುತ್ತಿದ್ದ ಸಾಹಿತ್ಯ ಕಾರ್ಯಕ್ರಮದ ನೆನಪನ್ನು ಹಸಿರಾಗಿಸಿದರು. ಪುಟಾಣಿಗಳಾದ ಆರೋಹಿ ಮತ್ತು ಅನಿಕಾ ಬಹಳ ಸೂಕವಾದ ಒಂದು ಹಳೆಯ ಕಾಲದ ಹಿಂದಿ ಸಿನೇಮಾ ಹಾಡು ಹಾಡಿ ರಂಜಿಸಿದರು. 5 ತಲೆಮಾರು ಸೇರಿದ್ದ ಈ ಹಬ್ಬ ಎಲ್ಲರ ಮನರಂಜಿಸಿತು.

**– ಅನಿತಾ ಪಿ. ಪೂಜಾರಿ, ತಾಕೊಡೆ**






ಶ್ರೀಮತಿ ಶಾರದಮ್ಮನವರ ಪರವಾಗಿ ಅವರ ಸಹೋದರಿ ಶ್ರೀಮತಿ ಲೀಲಾ ಜೋಯಿಸ್ ಮತ್ತು ಶ್ರೀಮತಿ ಸುಶೀಲಮ್ಮ ರಾಮಣ್ಣ ನವರ ಪರವಾಗಿ ಅವರ ಪುತ್ರ ಶ್ರೀ. ರಾಧೇಶ್ ರಾಮಣ್ಣ ಹಾಗೂ ಡಾ। ಎಚ್‌ಎಸ್.ಶ್ರೀನಿವಾಸ್ ಸನ್ಮಾನ ಸ್ವೀಕರಿಸಿದರು.





ಶ್ರೀ. ಎಚ್.ಕೆ.ಸೀತಾರಾಮ್ ಅವರನ್ನು ಸನ್ಮಾನಿಸುತ್ತಿರುವುದು ಮತ್ತು ಶ್ರೀಮತಿ ಹರಿಣಿ ರಾಮ್‌ಪ್ರಸಾದ್ ಅವರು ಅವರ ಪತಿ ಶ್ರೀ. ರಾಮ್ ಪ್ರಸಾದ್ ರವರ ಪರವಾಗಿ ಸನ್ಮಾನ ಸ್ವೀಕರಿಸುತ್ತಿರುವುದು

ಸನ್ಮಾನ ಸ್ವೀಕರಿಸುತ್ತಿರುವ ಶ್ರೀ.ಸಿ.ಆರ್.ವೆಂಕಟೇಶ್ ಮತ್ತು ಶ್ರೀಮತಿ ಅನಸೂಯ ಅಯ್ಯಂಗಾರ್




ಶ್ರೀ. ಕೆ.ಎನ್.ಕೀರ್ತಿ ಮತ್ತು ಶ್ರೀ. ಬಿ.ಎಂ.ಬೆಲೇರಿ ಅವರು ಸನ್ಮಾನ ಸ್ವೀಕರಿಸುತ್ತಿರುವುದು




ಶ್ರೀ. ಚಂಪಕನಾಥ್ ಮಾತ್ತು ಶ್ರೀ.ಹೆಚ್.ಆರ್.ವಸಂತ್ ಅವರನ್ನು ಸನ್ಮಾನಿಸುತ್ತಿರುವುದು




ಶ್ರೀಮತಿ ಸತ್ಯವತಿ ಪ್ರಸನ್ನ ಮತ್ತು ಮೈಸೂರು ಅಸೋಸಿಯೇಷನ್ನಿನ ಸಕ್ರಿಯ ಸದಸ್ಯರಾದ ಡಾ.ಬಿ.ಆರ್.ಮಂಜುನಾಥ್ ಹಾಗೂ ಶ್ರೀ.ಮಂಜುನಾಥಯ್ಯನವರನ್ನು ಸನ್ಮಾನಿಸುತ್ತಿರುವುದು.

Date of Publication : 10th of every month RNI No. 040015 / 83
Regd. No. MNE / 93 / 2015-17 Date of Posting:10/11th of every month
at Mumbai Patrika Channel Sorting Office G.P.O.




Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938